Sri V. S. PATIL.—Then, there is another custom of ours. And that is not burying the dead bodies, but burning them. It is becoming difficult to find sufficient fuel to burn the dead bodies. In Bombay, they have been using electric power to burn out the bodies.

Mr. SPEAKER.—Electric crematorium ?

Sri V. S. PATIL.—Such a thing will have to be done at least in cities and towns. Otherwise, it will be difficult for the people to follow their religious customs.

Then, regarding the grievances of Belgaum itself, Sir, we have inherited a Government which was working for the benefit of the capitalists *i.e.*, the British Raj. Even though slogans are made that we are following a socialistic pattern, still there is absolutely no curb on the

(SRI V. S. PATIL)

wrongs done to the people by these capitalists that supply electricity. In Belgaum and other places, the private companies are charging exhorbitant rates; the supply is not sufficient and the behaviour of these companies is arrogant and at times we had to go to courts of law. But even though the supply of power by Government is now available, still Government is not prepared to take up these private concerns by paying some compensation. A deputation of Belgaum City had waited upon the Hon. Chief Minister some time back. He had promised to do something but as usual, it has remained a promise and it has not been materialised. Pending decision of Government to take over this concern, Government must appoint a rating committee as allowed under the law and try to reduce the abnormal charges that are being levied by these private companies.

Secondly, Sir, the industrial development of Belgaum and its neighbourhood is held up for want of power because the private company is not in a position to supply sufficient power. They are also in doubt as to how long they would continue and so, they hesitate to invest more money on machinery for further generation of electricity. The net result is, all industrial development in Belgaum has been held up. This is a great set back for national development.

Thirdly, Sir, agricultural production. People have dug up severa wells all round Belgaum and Khanapur taluks. They are trying to purchase oil engines but they are very costly, as well as not available. Unless electricity is supplied to agriculturists, I think, agricultural production cannot be increase. From that point of view, electricity must be supplied to these villages primarily for pump sets and secondly for their house consumption. Therefore, Sir, instead of criticising the Board, I have made these suggestions. These suggestions may be considered by the Electricity Board and the Board must try to help the people at large.

† ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).—ಸ್ವಾಮಿ, ವಿದ್ಯುಚ್ಛಕ್ತಿ ನಮ್ಮ ಹಳೆಮೈಸೂರು ಪ್ರಾಂತ್ಯಕ್ಕೆ ಬಂದು 40 ವರ್ಷದಮೇಲೆ ಆಯಿತು. ಅಂದಿನಿಂದ ಇದುವರೆಗೆ ಈ ಪ್ರಾಂತ್ಯದಲ್ಲಿ ಸಂಪೂರ್ಣವಾಗಿ ದೇಶಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ, ಪಟ್ಟಣಗಳಲ್ಲಿ ಈ ವಿದ್ಯುಚ್ಛಕ್ತಿ ಸಹಾಯವನ್ನು ಪಡೆದುಕೊಳ್ಳುತ್ತೇವೆ ಅನ್ನತಕ್ಕಂಥ ಒಂದು ಮಹತ್ವ ಆಸೆಯನ್ನು ಹೊಂದಿದ್ದೆವು. ಅದು ಇನ್ನೂ ನೆರವೇರಲಿಲ್ಲ. ಈಗ ಶರಾವತಿಯಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗಿದೆ. ಆ ವಿದ್ಯುಚ್ಛಕ್ತಿ ಎಲ್ಲೆಲ್ಲಿ, ಹೇಗೆ ವಿನಿಯೋಗವಾಗುತ್ತದೆ ಅನ್ನತಕ್ಕಂಥ ಮಾತು ಇನ್ನೂ ಬಂದಿಲ್ಲ. water, water everywhere but not a drop to drink ಅನ್ನುವಹಾಗಿದೆ. ಎಲ್ಲೆಲ್ಲಿಯೂ ವಿದ್ಯುಚ್ಛಕ್ತಿ ಇದೆ, ಆದರೆ ಅದರ ಪ್ರಯೋಜನ ಇನ್ನೂ ಬಹಳ ಮಟ್ಟಿಗೆ ಆಗಿಯೇ ಇಲ್ಲ.

ರೂರಲ್ ಎಲೆಕ್ಟ್ರಿಫಿಕೇಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕು. ಈ ಬೋರ್ಡಿನವರು ಅದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಅದಕ್ಕೆ ಬಹುಶಃ ಕಾರಣ ಈ ಎಲೆಕ್ಟ್ರಿಕ್ ಬೋರ್ಡಿನಲ್ಲಿ ಗ್ರಾಮಾಂತರ ಜನಗಳ ವಿಚಾರದಲ್ಲಿ ಅಷ್ಟು ಹೆಚ್ಚು ಅನುಭವ ಪಡೆದಿರತಕ್ಕಂಥ ಸದಸ್ಯರುಗಳಿಲ್ಲದೇ ಹೋದುದೆ ಕಾರಣ ಎಂದು ನಾನಾದರೂ ಹೇಳಬಯಸುತ್ತೇನೆ. ಇನ್ನುಮುಂದಾದರೂ ಕೂಡ, ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ

ಗ್ರಾಮಾಂತರ ಪ್ರದೇಶಗಳಿಗೆ ಕೊಡುವಂತೆ ಆ ಬೋರ್ಡಿನವರು ಹೇಳುತ್ತಾರೆಂದು ನಾನು ನಂಬಿದ್ದೇನೆ.

ಇರಿಗೇಷನ್ ಪಂಪುಸೆಟ್ಟುಗಳ ವಿಚಾರದಲ್ಲಿ ಹೇಳುವುದಾದರೆ, ಈ 5 ವರ್ಷಗಳಿಗೆ 19,447 ಪಂಪು ಸೆಟ್ಟುಗಳನ್ನು ಮೈಸೂರು ದೇಶಾದ್ಯಂತ ಕೊಟ್ಟಿದ್ದಾರೆ. 5 ವರ್ಷದ ಹಿಂದೆ ಇದ್ದ 11,211 ಪಂಪುಸೆಟ್ಟುಗಳ ಜೊತೆಗೆ ಸೇರಿ ಒಟ್ಟು 30,658 ಪಂಪುಸೆಟ್ಟುಗಳನ್ನು ಈ ವರೆಗೆ ಕೊಟ್ಟಿದ್ದಾರೆ. 5 ವರ್ಷಕ್ಕೆ 19,477 ಐ. ಪಿ. ಸೆಟ್ಟುಗಳು ಅಂದರೆ ಸುಮಾರು ಎಷ್ಟು ವರ್ಷದಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ಕೂಡ ಯಾವ್ಯಾವ ರೈತನಿಗೆ ಬೇಕಾಗುತ್ತದೊ ಆ ರೈತನಿಗೆ ಕೊಡುವ ಕಾಲ ಬರುತ್ತದೆ ಅನ್ನತಕ್ಕಂಥಾದ್ದನ್ನು ನಿರೀಕ್ಷಣೆ ಮಾಡುವುದು ಬಹಳ ಕಷ್ಟ.

ಅಧ್ಯಕ್ಷರು.—ಆ 30 ಸಾವಿರದಲ್ಲಿ 11 ಸಾವಿರವೂ ಸೇರಿದೆ. ಈಚೆಗೆ 19 ಸಾವಿರ ಕೊಟ್ಟಿದ್ದಾರೆ. ಒಟ್ಟು 30 ಸಾವಿರ ಆಯಿತು. ಮೂರನೆಯ ಪಂಚವಾರ್ಷಿಕ ಯೋಜನೆ ಒಳಗೆ ಇನ್ನೂ 3 ಸಾವಿರ ಕೊಡುತ್ತೇವೆ ಎಂದು ಹೇಳಿದ್ದಾರೆ. 30 ಸಾವಿರ ಕೊಟ್ಟಿರುವುದು, from the date of introduction of pump sets. ಹಿಂದೆ 11 ಸಾವಿರ ಕೊಟ್ಟಿರುವುದು ಬಿಟ್ಟುಬಿಟ್ಟರೆ, ಈಚೆಗೆ 19 ಸಾವಿರ ಕೊಟ್ಟಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಹೌದು ಸ್ವಾಮಿ. ಅದಿರಲಿ, ಕೋಲಾರ ಜಿಲ್ಲೆಗೆ ಮತ್ತು ಬೆಂಗಳೂರು ಜಿಲ್ಲೆಗೆ ಹೆಚ್ಚಿಗೆ ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ. ಈ ಜಿಲ್ಲೆಗಳಲ್ಲಿ ನೀರಾವರಿ ಸೌಕರ್ಯ ಬಹಳ ಕಡಿಮೆ. ಆದ್ದರಿಂದ ಇನ್ನೂ ಹೆಚ್ಚಿಗೆ ರೀತಿಯಲ್ಲಿ ಪಂಪುಸೆಟ್ಟುಗಳನ್ನು ಕೊಡಬೇಕು. ನಾವು ಈಚೆಗೆ ಕೆಲವು ವರ್ಷಗಳಿಂದ ಈ ಪಂಪುಸೆಟ್ಟುಗಳನ್ನು ಕೊಡಬಹುದೆಂದು ನಿರೀಕ್ಷಣೆ ಮಾಡಿದ್ದೆವು ಈ ಜಿಲ್ಲೆಗೆ ಇನ್ನೂ ಹೆಚ್ಚಿನ ಸೌಕರ್ಯ ಲಭ್ಯವಾಗಬೇಕಾಗಿತ್ತು ಎಂದು ನಾನಾದರೂ ಹೇಳಬಯಸುತ್ತೇನೆ.

ರೂರಲ್ ಎಲೆಕ್ಟ್ರಿಫಿಕೇಷನ್ನು ಕಾರ್ಯಕ್ರಮಗಳಿಗಾಗಿ ಈಗ್ಗೆ ಸುಮಾರು ಐದು ವರ್ಷಗಳಿಂದ ವಿದ್ಯುಚ್ಛಕ್ತಿಯನ್ನು ಒದಗಿಸಿರತಕ್ಕದ್ದು ಕೇವಲ 3,129 ಗ್ರಾಮಗಳಿಗೆ ಎಂದಾಗುತ್ತದೆ. ಇದರ ಸರಾಸರಿ ನೋಡಿದರೆ ಒಂದು ವರ್ಷಕ್ಕೆ 626 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದಂತಾಗುತ್ತದೆ, ಇದು ತೀರಾ ಕಡಿಮೆ. ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಒದಗುತ್ತದೆ ಎಂದು ಹೇಳತಕ್ಕದ್ದು ದುಸ್ತರ. ಇನ್ನು ಗ್ರಾಮಗಳಲ್ಲಿ ವ್ಯವಸಾಯಕ್ಕೋಸ್ಕರವಾಗಿ ಇಷ್ಟು ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳುತ್ತಾರೆ. ಇದರ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದಾಗ ಸರಕಾರದವರು ಅದಕ್ಕೆ ಉತ್ತರ ಕೊಟ್ಟಿರುವಂತೆ ನೋಡುವುದಾದರೆ ವ್ಯವಸಾಯಕ್ಕೆ ಶೇಕಡಾ 66ರಷ್ಟು, ಕೈಗಾರಿಕೆಗಾಗಿ ಶೇಕಡ 2.85ರಷ್ಟು ಎಂದರೆ ಒಟ್ಟು 68.85ರಷ್ಟು ವ್ಯವಸಾಯ ಹಾಗೂ ಕೈಗಾರಿಕೆಗಳಿಗೆ ಕೊಡುತ್ತಿದ್ದಾರೆ. ಇದರಲ್ಲಿ ಲಾಸ್ ಏನಾಗುತ್ತದೆ. ಎಂದರೆ, ಟ್ರಾನ್ಸ್‌ಮಿಷನ್ ಲೈನುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವಾಗ ಅದಕ್ಕಾಗಿ ಸುಮಾರು ಶೇಕಡಾ ಹತ್ತರಷ್ಟು ವ್ಯಯವಾಗುತ್ತದೆ. ಈ ರೀತಿಯಾಗಿ ಶೇಕಡಾ ಹತ್ತರಷ್ಟು ವ್ಯಯಮಾಡುವುದು ಸರಿಯೇ ಎನ್ನತಕ್ಕದ್ದನ್ನು ವಿಚಾರ ಮಾಡಬೇಕು ಮತ್ತು ಇಷ್ಟು ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಂಡಸ್ಟ್ರಿಯಲಿಸ್ಟುಗಳಿಗಾಗಿ ವಿದ್ಯುಚ್ಛಕ್ತಿ ಕೊಡುವಾಗ ಕೇವಲ ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟುಗಳಿಗೇ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ, ಸಣ್ಣ ಪುಟ್ಟ ಕೈಗಾರಿಕೆಗಳನ್ನು ಮಾಡುವವರಿಗೆ ಹೆಚ್ಚಿಗೆ ಲಭ್ಯವಾಗುತ್ತಿಲ್ಲ. ನನಗೆ ತಿಳಿದಂತೆ ನಮ್ಮ ರಾಮನಗರದಲ್ಲಿರುವ ಕೈಗಾರಿಕಾ ಎಸ್ಟೇಟಿಗಾಗಿ ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಬೇಕಾದರೆ ಮಹಾ ದುಸ್ತರವಾಯಿತು ಮತ್ತು ಬಹಳ ಕಷ್ಟವಾಯಿತು. ಇನ್ನು ನಮಗೆ ಕೊಟ್ಟಿರುವ ಫೈನಾನ್ಷಿಯಲ್ ಸ್ಟೇಟುಮೆಂಟಿನ ಮೂರು ವರ್ಷದ ಪುಸ್ತಕಗಳೂ ನನ್ನಲ್ಲಿವೆ. ಅದರಲ್ಲಿ ನೋಡುವಾಗ ರೂರಲ್ ಎಲೆಕ್ಟ್ರಿಫಿಕೇಷನ್ನು ಹಾಗೂ ಎಕ್ಸ್‌ಟೆನ್‌ಷನ್ ಲೈನುಗಳಿಗೋಸ್ಕರವಾಗಿ ಹೇಗೆ ಖರ್ಚಾಗುತ್ತದೆ ಎಂದರೆ ಮೂರು ವರ್ಷದಲ್ಲಿಯೂ ಕೆಲವು ಎಕ್ಸ್‌ಟೆನ್‌ಷನ್ನುಗಳಿಗೋಸ್ಕರ ಅಂದಾಜನ್ನು ಮಾಡಿ ಅದನ್ನು ಒಂದು ವರ್ಷ ಮಾಡಿ ಮತ್ತೊಂದು ವರ್ಷದಲ್ಲಿ ಆ ಎಕ್ಸ್‌ಟೆನ್‌ಷನ್ನು ಕೆಲಸವನ್ನು ಮಾಡದೇ ಹಾಗೇ ಕೈಬಿಟ್ಟು ಬಿಟ್ಟಿದ್ದಾರೆ. ಇದೇಕೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಉದಾಹರಣೆಯಾಗಿ ನಮ್ಮ ಮಂಡ್ಯ ಡಿವಿಜನ್ನಿಗೆ ರಾಮನಗರವೂ ಸೇರಿದೆ ಇದರಲ್ಲಿ ಒಂದು ಐಟಂ Reducing No. 6 B and S Copper Wire, etc... between Channapatna and Maddur sections: 1,40,500 ರೂಪಾಯಿಗಳಷ್ಟು ಅಂದಾಜನ್ನು ಮಾಡಿದ್ದರು. ಇದಕ್ಕಾಗಿ 1961—62ನೇ ಸಾಲಿನಲ್ಲಿ ಐದು ಸಾವಿರ ರೂಪಾಯಿಗಳಷ್ಟು ಒದಗಿಸಿದ್ದರು. 1962—63ನೇ ಸಾಲಿನಲ್ಲಿ ಐದು ಸಾವಿರ ರೂಪಾಯಿಗಳಷ್ಟು ಒದಗಿಸಿದ್ದರು. ಆದರೆ 1963—64ನೇ ಸಾಲಿನಲ್ಲಿ ಇದರ ಬಗ್ಗೆ ಯಾವ ಅಂದಾಜೂ ಮಾಡದೇ ಹಾಗೇ ಕೈಬಿಟ್ಟುಬಿಟ್ಟಿದ್ದಾರೆ. ಹೀಗೆ ಇನ್ನೂ ಕೆಲವು ಬಾಬುಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ನು ಮತ್ತು

(ಶ್ರೀ ಟಿ. ಮಾದಯ್ಯ ಗೌಡ)

ಎಕ್ಸ್‌ಟೆನ್‌ಷನ್ನು ಇದಕ್ಕಾಗಿ ಸ್ವಲ್ಪವೇ ಹಣವನ್ನು ಒದಗಿಸಿ ಕೆಲವು ಕಡೆ ಹಾಗೆ ಬಿಡುವುದು ಸರಿಯೇ ಎಂದು ಕೇಳಬೇಕಾಗಿದೆ. ಇದೇತಕ್ಕಾಗಿ ಮಾಡಲಿಲ್ಲ ಎನ್ನುವ ಒಂದು ಅನುಮಾನ ಬರಲೂ ಕಾರಣ ವಾಗಿದೆ. ಇದನ್ನೆಲ್ಲಾ ತಪ್ಪಿಸಿ ಕೆಲಸಗಳು ಸರಿಯಾಗಿ ಕಾರ್ಯಗತವಾಗುವಂತೆ ತಕ್ಕ ಕ್ರಮ ತೆಗೆದು ಕೊಳ್ಳಬೇಕೆಂದು ಇಲ್ಲಿ ಹೇಳಬಯಸುತ್ತೇನೆ. ಇರಿಗೇಷನ್ನ ಪಂಪುಸೆಟ್ಟುಗಳಿಗಾಗಿ ಎಲೆಕ್ಟ್ರಿಸಿಟಿ ಯನ್ನು ಕೇಳುವಾಗ ಅವರು ಎಷ್ಟು ಕೇಳುತ್ತಾರೋ ಅದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಅದಕ್ಕೆ ಕಾರಣವಾಗಿ ಅವರಿಗೆ ವೈರುಗಳು ಬಂದಿಲ್ಲ, ಕಂಬಗಳು ಇಲ್ಲ ಇತ್ಯಾದಿ ಹೇಳಿ ಇನ್ನೂ ಅನೇಕ ತೊಂದರೆಗಳಿಂದಾಗಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನಮಗೆ ಇಷ್ಟೊಂದು ಪವರು ಉತ್ಪತ್ತಿಯಾಗುವ ಕಾಲದಲ್ಲ ಇದನ್ನ ಪಯೋಗಿಸುವ ಮೊದಲೆ ಅದಕ್ಕೆ ಬೇಕಾಗುವ ಎಲ್ಲ ಸಾಮಾನುಗಳನ್ನೂ ಏಕೆ ಒದಗಿಸಿಕೊಳ್ಳಬಾರದು ? ನಮ್ಮ ತಾಲ್ಲೂಕಿನಲ್ಲೇ ಪಂಪುಸೆಟ್ಟುಗಳಿಗಾಗಿ ಅರ್ಜಿಹಾಕಿಕೊಂಡಿರುವವರಲ್ಲಿ ಇನ್ನೂ 300 ಐ. ಪಿ. ಸೆಟ್ಟು ಅರ್ಜಿಗಳು ಪೆಂಡಿಂಗ್‌ನಲ್ಲವೆ ಇವು ಫೈಸಲಾಗದ ಸುಮಾರು ಒಂದೆರಡುಮೂರು ವರ್ಷಗಳಿಂದಲೂ ಹಾಗೆ ಇವೆ. ಇದೇ ರೀತಿ ಬೇರೆ ಕಡೆಗಳಲ್ಲಿಯೂ ಪಂಪುಸೆಟ್ಟುಗಳನ್ನು ಕೊಡುವುದರಲ್ಲಿ ತೊಂದರೆಗಳಾಗುತ್ತಿವೆ. ಅಲ್ಲದೆ ಈ ಸಂದರ್ಭ ದಲ್ಲಿ ಇನ್ನೂ ಒಂದು ವಿಚಾರವನ್ನು ಇಲ್ಲಿ ಹೇಳಿದರೆ ಅದು ಅಪ್ರಸ್ತುತವಾಗಲಾರದು. ತಾಲ್ಲೂಕು ಗಳಲ್ಲಿರುವ ಅಧಿಕಾರಿಗಳು ಪಂಪುಸೆಟ್ಟುಗಳನ್ನು ಕೊಡುವಾಗ ತನಗೆ ಬೇಕಾದವರಿಗೇ ಕೊಡುವುದು ಸಾಧಾರಣವಾಗಿದೆ. ಹಿಂದೆ ಎರಡು ಮೂರು ವರ್ಷಗಳಿಂದ ಕೊಟ್ಟ ಅರ್ಜಿಗಳನ್ನು ಕೆಳಗಿಟ್ಟು ತಮಗೆ ಬೇಕಾದವರಿಗೆ ಮಾತ್ರ ಪಂಪುಸೆಟ್ಟುಗಳನ್ನು ಕೊಡುತ್ತಿದ್ದಾರೆ. ಇದನ್ನು ಬೋರ್ಡಿನವರು ಸರಿಯಾಗಿ ವಿಚಾರಣೆ ಮಾಡಿ ಸರಿಪಡಿಸಬೇಕಾದುದು ಅಗತ್ಯವಾಗಿದೆ. ಎಲ್ಲೆಲ್ಲಿ ಅವಶ್ಯಕತೆಗಳಿವೆಯೋ ಅಲ್ಲಿಗೆಲ್ಲಾ ಪವರನ್ನು ಕೊಡಬೇಕಾದುದು ಸೂಕ್ತವಾದುದು. ಗ್ರಾಮಾಂತರ ಪ್ರದೇಶಗಳಲ್ಲಿ ಯಾರ್ಯಾರು ಪಂಪುಸೆಟ್ಟುಗಳು ಬೇಕೆಂದು ಕೇಳುತ್ತಾರೋ ಅವರಿಗೆಲ್ಲಾ ಕೊಟ್ಟು ಅದಕ್ಕೆ ಬೇಕಾದ ಎಲೆಕ್ಟ್ರಿಸಿಟಿ ಯನ್ನೂ ಕೊಡುವ ಒಂದು ಪ್ರಯತ್ನ ಮಾಡಬೇಕೆಂದು ಮತ್ತು ಹೆಚ್ಚಾಗಿ ಗ್ರಾಮಗಳಿಗೆ ದೊರೆಯು ವಂತೆ ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮಿ, ಶ್ರೀಮಾನ್ ಷಂಸುದ್ದೀನ್ ಸಾಹೇಬರು ಹೋದ ಮೇಲೆ ಈ ಖಾತೆಯನ್ನು ಮತ್ತು ಇದರ ಬಹು ಮುಖ್ಯ ಕಾರ್ಯಗಳನ್ನೆಲ್ಲಾ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೇ ಇಟ್ಟುಕೊಂಡಿದ್ದಾರೆ. ಸಾಮಾನ್ಯ ಜನ ಅವರನ್ನು ನೋಡ ಬೇಕಾದರೆ ಕಷ್ಟ ಮತ್ತು ಅವರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಮ್ಯಾನ್ ಪವರು ಯುಟಿಲೈಸೇಷನ್ನು ಸರಿಯಾಗಿ ನಮ್ಮ ಸರಕಾರದಲ್ಲಿ ಆಗುತ್ತಿದೆಯೆ ಎಂದು ನೋಡಿದರೆ ನಮ್ಮಲ್ಲಿರುವ ಅನೇಕ ಉಪಮಂತ್ರಿಗಳಿಗೇ ಯಾವ ಉದ್ಯೋಗವೂ ಇಲ್ಲದೆ ಸುಮ್ಮನೆ ತಿರುಗಾಡು ತ್ತಿರುವುದರಿಂದ ಇವರಲ್ಲಿ ಯಾರಿಗಾದರೂ ಉದ್ಯೋಗವನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ಈ ಇಲಾಖೆಯನ್ನು ಅವರಿಗೆ ಕೊಟ್ಟರೆ ಇನ್ನು ಮುಂದಾದರೂ ಸ್ವಲ್ಪಮಟ್ಟಿಗೆ ಕೆಲಸಗಳು ಆಗಬಹುದು ಎಂದು ಇಲ್ಲಿ ಹೇಳಬಯಸುತ್ತೇನೆ. ಅಲ್ಲದೆ ನಮ್ಮ ಸಭೆಯ ಮಾನ್ಯ ಸದಸ್ಯರೂ ವಯೋವೃದ್ಧರೂ ಆದ ಶ್ರೀಮಾನ್ ಮಾದಯ್ಯ ಗೌಡರಿಗೆ ಇವೊತ್ತು ದೇವರು ಸದ್ಬುದ್ಧಿ ಕೊಟ್ಟು ಅವರು ರೈತಾಪಿ ಜನರ ಬಗ್ಗೆ ಹೇಳಿದುದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಶ್ರೀ ಟಿ. ಮಾದಯ್ಯ ಗೌಡ.—ಭಗವಂತ ನನಗೆ ಯಾವಾಗಲೂ ಸದ್ಬುದ್ಧಿಯನ್ನೇ ಕೊಡುತ್ತಿದ್ದಾನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಆಹಾರದ ಸಮಸ್ಯೆ ಕೇವಲ ಇನ್ನೂ 10—15 ದಿವಸಗಳಲ್ಲಿ ಬಹಳ ಉಲ್ಬಣಾವಸ್ಥೆಗೆ ಬರುತ್ತದೆ ಎನ್ನುವು ದರಲ್ಲಿ ಸಂಶಯವಿಲ್ಲ. ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳೇನೋ ಮದರಾಸಿನಿಂದ ಅಕ್ಕಿ ತರಿಸು ತ್ತೇವೆ, ಅಮೆರಿಕಾದಿಂದ ಗೋಧಿ ತರಿಸುತ್ತೇವೆಂದು ಹೇಳುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಆದರೆ ಆಹಾರ ಸಮಸ್ಯೆ ಇನ್ನು ಕೆಲವು ದಿನಗಳಲ್ಲೇ ತುಂಬಾ ಗಾಬರಿಯ ಸ್ಥಿತಿಗೆ ಬರುವುದರಲ್ಲಿದೆ. ಇದನ್ನು ನಿವಾರಣೆ ಮಾಡಬೇಕಾದುದು ಬಹಳ ಮುಖ್ಯ ಕರ್ತವ್ಯ. ನೀರಾವರಿ ಸೌಕರ್ಯ ಇಲ್ಲದ ಜಾಗಗಳಲ್ಲಿ ನೀರಿಗೆ ಪಂಪುಸೆಟ್ಟುಗಳನ್ನು ಕೊಡುವುದಿರಲಿ, ಆಹಾರ ಸರಬರಾಜು ಮಾಡುವುದು ಬಹಳ ಮುಖ್ಯವಾದ ವಿಚಾರ. ನಮ್ಮ ಎಲೆಕ್ಟ್ರಿಸಿಟಿ ಬೋರ್ಡಿನವರು ಕೆಲಸ ಮಾಡುವುದನ್ನು ನೋಡಿದರೆ ಯಾವುದೋ ಒಂದು ಕಂಪೆನಿಯವರು ಕೆಲಸ ಮಾಡುವಂತೆ ಮಾಡುತ್ತಿದ್ದಾರೆ. ಅಗ್ರಿಕಲ್ಚರು ಇಲಾಖೆಯವರು ಪಂಪುಸೆಟ್ಟುಗಳನ್ನು ಕೊಡ ತ್ತಾರೆ, ನಮ್ಮ ಕೆಲಸ ಬರೀ ಪವರನ್ನು ಕೊಡುವುದು ಮಾತ್ರ ಎಂದು ಅವರು ತಿಳಿದಿದ್ದಾರೆ. ಸಾಮಾನ್ಯವಾಗಿ ಕೊಯಮುತ್ತೂರಿನಿಂದ ಇಲ್ಲಿಗೆ ಬಂದು

ಹಳ್ಳಿಯಲ್ಲಿ ಒಂದು ಚಿಲ್ಲರೆ ಅಂಗಡಿ ಹಾಕಿ ಅದಕ್ಕಾಗಿ ಪವರನ್ನು ಕೇಳಿದರೆ ಕೊಡುತ್ತಾರೆ. ಆದರೆ ಹಳ್ಳಿಯ ರೈತರಿಗೆ ಒಂದು ಬಾವಿಗಾಗಿ ಪವರು ಕೇಳಿದರೆ ಅವರಿಗೆ ಸಿಗುವುದಿಲ್ಲ. ಈ ರೀತಿಯಾಗಿ ಬೋರ್ಡಿನವರು ಕೆಲಸ ಮಾಡಿದರೆ ಇದರಿಂದ ರೈತನಿಗೇನೂ ಪ್ರಯೋಜನ ಮಾಡಿದಂತಾಗುವುದಿಲ್ಲ. ಹೀಗಾದರೆ ಬೋರ್ಡಿನವರು ಅವರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದಂತಾಗುತ್ತದೆಯೇ ಎಂದು ನಾನು ಇಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಬೇಕಾಗಿದೆ. ಅಲ್ಲದೆ ಇದಕ್ಕೆ ಬದಲಾಗಿ ಬೋರ್ಡು ಮಾಡುವುದಕ್ಕಿಂತ ಇದನ್ನು ಸರಕಾರದವರೇ ವಹಿಸಿಕೊಂಡು ಎಲ್ಲ ಕೆಲಸ ಕಾರ್ಯಗಳನ್ನೂ ತೆಗೆದು ಕೊಳ್ಳುವುದು ಒಳ್ಳೆಯದೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಮಾವ ಊರಾಗಿ ಮನೆಗಳಿಗೆ ಬೀದಿಗಳಿಗೆ ದೀಪ ಹಾಕುವುದಕ್ಕೆ ವಿದ್ಯುಚ್ಛಕ್ತಿ ಒದಗಿಸಬೇಕಾದ ಮಹತ್ತರ ಕೆಲಸ ಇದೆ. ಇತ್ತೀಚೆಗೆ ಹೊಸ ಹೊಸ ಪ್ರಯೋಗ ಮಾಡಿ ನೋಡುತ್ತಿದ್ದಾರೆ. ವಿದ್ಯುಚ್ಛಕ್ತಿ ಯಿಂದ ಹೆಣ ಸುಡುವುದನ್ನು ಪ್ರಯೋಗ ಮಾಡಿದ್ದಾರೆ. ಈಗಿನ ಕಾಲದಲ್ಲಿ ಇಂಥ ಪ್ರಯೋಗ ಮಾಡದೆ ಹಳ್ಳಿಗಳಲ್ಲಿ ಎಲ್ಲೆಲ್ಲಿ ಇಟ್ಟಿಗೆ ಹೆಂಚು ತಯಾರುಮಾಡುವುದಕ್ಕೆ ಒಳ್ಳೇ ಮಣ್ಣು ಇದೆಯೋ ಅಂಥಲ್ಲಿ ವಿದ್ಯುಚ್ಛಕ್ತಿಯನ್ನು ಆದಷ್ಟು ಬೇಗನೆ ಒದಗಿಸಬೇಕು. ಇಂಥ ಕೆಲಸಕ್ಕೆ ಕರಂಟ್ ಕೊಡಬೇಕು. ಪಿ. ಡಬ್ಲ್ಯೂ. ಡಿ. ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅನುಕೂಲವಿರುವುದನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ. ಕಾಳಿ ನದಿ ಪ್ರಾಜೆಕ್ಟು ಆಗುತ್ತದೆ. ಅದಕ್ಕೆ ಪ್ರೋತ್ಸಾಹ ಕೊಡಬೇಕಾಗಿದೆ. ನಮ್ಮ ದುಡ್ಡು ಸಾಲಾ ತೆಗೆದುಕೊಂಡು ಇಲೆಕ್ಟ್ರಿಸಿಟಿ ಉತ್ಪತ್ತಿ ಮಾಡಿ ಅದನ್ನು ಆಂಧ್ರಕ್ಕೆ ಕೊಡುವುದು ಸರಿಯಲ್ಲ. ಆಂಧ್ರಕ್ಕೆ ಬೇಕಾದರೆ ನಾಗಾರ್ಜುನ ಸಾಗರ ಪ್ರೊಜೆಕ್ಟ್ ಇದೆ. ಅಲ್ಲಿಂದ ನಮಗೆ ಏನಾದರೂ ಸಹಾಯ ಕೊಡುತ್ತಾರೆಯೇ? ನಮ್ಮ ಹೆಸರಿನಲ್ಲಿ ಹಣ ಖರ್ಚು ಮಾಡುವುದು ಇನ್ನೊಬ್ಬರಿಗೆ ಸಹಾಯ ಮಾಡುವುದು ಸರಿಯಲ್ಲ. ರಾಜಕೀಯ ಅಪಾದನೆಗೆ ಒಳಗಾಗಬಾರದು. ಧೈರ್ಯದಿಂದ ಹಣ ತಂದು ಕೆಲಸ ಮಾಡುತ್ತೇವೆ ಎಂದು ಪಣ ತೊಡಬೇಕು. ಇಲ್ಲವಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು ಎಂದು ಹೇಳುತ್ತೇನೆ.

4-30 P.M.

ಪಂಪುಸೆಟ್ಟು ಇದ್ದಲ್ಲಿ ಎಲೆಕ್ಟ್ರಿಸಿಟಿ ಇಲ್ಲ. ಎಲೆಕ್ಟ್ರಿಸಿಟಿ ಇದ್ದಲ್ಲಿ ಪಂಪುಸೆಟ್ಟು ಇಲ್ಲ ವ್ಯವಸಾಯ ಅಭಿವೃದ್ಧಿಪಡಿಸಲು ಕರೆಂಟ್ ಕೊಡಿ ಎಂದು ಕೇಳಿದರೆ ಕಂಬ ಇಲ್ಲ ಎಂದು ಹೇಳುತ್ತಾರೆ. ದೇಶದಲ್ಲಿ ಇಂದು ಆಹಾರ ಮುಖ್ಯ ಸಮಸ್ಯೆಯಾಗಿದೆ. ವ್ಯವಸಾಯ ಸುಧಾರಣೆಯಾಗದಿದ್ದರೆ ನಮ್ಮ ದೇಶ ಮುಂದುವರಿಯಲಿಕ್ಕೆ ಸಾಧ್ಯವಿಲ್ಲ. ವ್ಯವಸಾಯ ಸುಧಾರಣೆ, ಆಹಾರ ಸಮಸ್ಯೆಗೆ ಪ್ರಥಮ ಗಮನ ಸರಕಾರ ಕೊಡಬೇಕು. ಈ ವಿಚಾರದಲ್ಲಿ ಪ್ರಶ್ನೆ ಕೇಳಿದರೆ ವಿವರ ಇಲ್ಲ, ತರಿಸಿ ಕೊಡುತ್ತೇನೆ ಎಂದು ಉತ್ತರ ಹೇಳುತ್ತಾರೆ. ಮಂಗಳೂರು ಜಿಲ್ಲೆಯ ಜನರಲ್ಲಿ ಒಗ್ಗಟ್ಟು ಇದೆ. ತಮಗೆ ಏನು ಬೇಕೋ ಅದನ್ನು ತರಿಸಿಕೊಳ್ಳುತ್ತಾರೆ. ಮಂಗಳೂರು ಜಿಲ್ಲೆಯ ಸಬ್ ಡಿವಿಜನ್ನಿನಲ್ಲಿ ವೈರ್ ಇದೆ. ನಾವು ಪಂಪುಸೆಟ್ಟಿಗೆ ಕರೆಂಟ್ ಕೇಳಿದರೆ ವೈರ್ ಇಲ್ಲ ಕಂಬ ಇಲ್ಲ ಎಂದು ಹೇಳುತ್ತಾರೆ. ಅಲ್ಲಿರುವ ವೈರ್ ತರಿಸಿ ಇಲ್ಲಿ ಪಂಪುಸೆಟ್ಟುಗಳಿಗೆ ಕರೆಂಟ್ ಒದಗಿಸಬೇಕು. ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ದೇಶದ ಯಾವ ಮೂಲೆಯಿಂದಾದರೂ ವೈರ್ ತರಿಸಿಕೊಂಡು ಬಾವಿಗಳಿಗೆ ಕನೆಕ್ಷನ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆ ಎಂದು ನಾನು ಆಶಿಸುತ್ತೇನೆ.

ಅನೇಕ ಕಡೆ ಪ್ರೈವೇಟ್ ಪಾರ್ಟೀಸ್ ಜನರೇಟರ್ ಇಟ್ಟುಕೊಂಡು ವಿದ್ಯುಚ್ಛಕ್ತಿ ಒದಗಿಸಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಬೆಳಗಾಂನಲ್ಲಿ ಈ ರೀತಿ ನಡೆಯುತ್ತಿದೆ. ನಮ್ಮ ದೇಶದಲ್ಲಿ ಉತ್ಪತ್ತಿ ಯಾಗತಕ್ಕಂಥ ಎಲೆಕ್ಟ್ರಿಸಿಟಿಯನ್ನು ತಕ್ಷಣ ಉಪಯೋಗಿಸಿಕೊಳ್ಳುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಎಲೆಕ್ಟ್ರಿಸಿಟಿ ಇಲ್ಲ, ವೈರ್ ಇಲ್ಲ, ಕಂಬ ಇಲ್ಲ ಎಂದು ಹೇಳುವುದು ಸರಿಯಲ್ಲ. ಈ ವಿಚಾರದಲ್ಲಿ ಸರಕಾರದ ಧೋರಣೆ ಬದಲಾಗಬೇಕು. ನಿನ್ನೆ ಇದ್ದ ಮನೋಭಾವನೆ ಇಂದು ಸರಕಾರಕ್ಕೆ ಇಲ್ಲ. ನಿನ್ನೆಯ ದಿನ ಅದಕ್ಕಾಗಿಯೇ ಡಸ್ಟ್ ಅಂದರೆ ಧೂಳಿನಿಂದ ಕೂಡಿದ ಗಾಳಿ ಈ ಸಭೆಯಲ್ಲಿ ಬಿಟ್ಟು ಒಂದು ವಿಚಿತ್ರ ಪರಿಣಾಮವಾಯಿತೋ ಗೊತ್ತಿಲ್ಲ. ಇಂದು ಇಲೆಕ್ಟ್ರಿಸಿಟಿ ಬಹಳ ಅಗತ್ಯವಾಗಿ ಎಲ್ಲರಿಗೆ ಬೇಕಾಗಿದೆ. ಸರಿಯಾದ ರೀತಿಯಲ್ಲಿ ಹಳ್ಳಿಗಳಿಗೆ ಒದಗಿಸದಿದ್ದರೆ ಅಪನಂಬಿಕೆ ಯುಳ್ಳವರು ಆಗುತ್ತೀರಿ ಮತ್ತು ದೇಶಕ್ಕೆ ಒಳ್ಳೆಯದು ಆಗುವುದಿಲ್ಲ. ಈ ರೀತಿ ಮಾಡಬಾರದು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈಗ ಇರತಕ್ಕ ಎಲೆಕ್ಟ್ರಿಸಿಟಿ ಬೋರ್ಡಿನ ಸಂಬಂಧಪಟ್ಟ ಆಯವ್ಯಯ ಅಂದಾಜಿನ ಬಗ್ಗೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಐ. ಪಿ. ಸೆಟ್ಟುಗಳ ಬಗ್ಗೆ ಅನೇಕ ಮಾನ್ಯ

(ಶ್ರೀಮತಿ ಬಸವರಾಜೇಶ್ವರಿ)

ಸದಸ್ಯರು ಮಾತನಾಡಿದ್ದಾರೆ. ಪಂಪುಸೆಟ್ಟುಗಳ ಬಗ್ಗೆ ಒಂದು ಹೇಳಬೇಕೆಂದಿದ್ದೇನೆ. ಲಿಂಗಸೂಗೂರು ಕುಷ್ಟಗಿ ಮುಂತಾದ ನಮ್ಮ ಜಿಲ್ಲೆಯ ಪ್ರದೇಶದಲ್ಲಿ ನೀರಾವರಿ ಸೌಕರ್ಯ ಹೊಸದಾಗಿ ದೊರೆಯುತಿದೆ. ಕಳೆದ ಎರಡು ವರ್ಷದಿಂದ ಐ.ಪಿ. ಸೆಟ್ಟು ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಬಹಳ ವಿಳಂಬವಾಗುತ್ತಾ ಇದೆ. ಆದರೆ ಕೆಲವು ಜಿಲ್ಲೆಗಳಿಗೆ ಸಾವಿರಗಟ್ಟಲೆ ಪಂಪುಸೆಟ್ಟು ಕೊಟ್ಟಿದ್ದಾರೆ. ಉದಾಹರಣೆಗಾಗಿ ನಮ್ಮ ಮುಂದಿರುವ ಅಂಕಿ ಅಂಶಗಳನ್ನು ನೋಡಿದರೆ ಕೋಲಾರ ಜಿಲ್ಲೆಗೆ 7,492, ತುಮಕೂರು ಜಿಲ್ಲೆಗೆ 5,262 ಪಂಪುಸೆಟ್ಟು ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ. ಆದರೆ ಬೀದರ್ ಜಿಲ್ಲೆಗೆ 2, ರಾಯಚೂರು ಜಿಲ್ಲೆಗೆ 20, ಗುಲ್ಬರ್ಗಾ ಜಿಲ್ಲೆಗೆ 29 ಕೊಟ್ಟಿದ್ದಾರೆ. ಅಲ್ಲಿಯ ಜನರು ಪಂಪುಸೆಟ್ಟು ಕೇಳಲಿಲ್ಲ, ಜನರಿಗೆ ಗೊತ್ತಿಲ್ಲ ಎಂದು ಸಂಶಯಪಡಬಹುದು. ಸುಮಾರು ಒಂದು ವರ್ಷದಿಂದ ರಾಯಚೂರು ಜಿಲ್ಲೆಗೆ 300 ಪಂಪುಸೆಟ್ಟು ಬೇಕೆಂದು ನಾನು ಅನೇಕ ಸಲ ಹೇಳುತ್ತಲೇ ಇದ್ದೇನೆ. ನಾವು ಕೇಳಿದರೆ ವೈರ್ ಇಲ್ಲ, ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಾರೆ. ಇದು ಚನ್ನಾಗಿರುವುದಿಲ್ಲ. ಎಲ್ಲರನ್ನೂ ಸಮದೃಷ್ಟಿಯಿಂದ ನೋಡಿಕೊಂಡು, ಇರುವುದನ್ನು ಹಂಚಬೇಕಾದುದು ಸರಕಾರದ ಕರ್ತವ್ಯವಾಗಿದೆ ಎಂದು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ನಾವು ತುಂಗಭದ್ರ ನೀರು ಉಪಯೋಗಿಸುವುದಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಆ ಮಾತು ಬೇರೆ. ಪಂಪುಸೆಟ್ಟು ಇಲ್ಲದೆ ಬಹಳ ಅನಾನುಕೂಲವಾಗುತ್ತಿದೆ. ಕಿರ್ಲೋಸ್ಕರ್ ಮತ್ತು ಕ್ರಾಮ್ಟನ್ ಸೆಟ್ಟುಗಳು ಮಾರ್ಕೆಟ್ಟಿನಲ್ಲಿ ದೊರೆಯುತ್ತವೆ. ಅರ್ಜಿ ಹಾಕಿಕೊಂಡವರಿಗೆ ಡಿಪಾರ್ಟ್‌ಮೆಂಟ್ ಒದಗಿಸುವ ಸೆಟ್ಟು ಇರದಿದ್ದರೆ ಅರ್ಜಿ ಬದಲಾವಣೆ ಮಾಡಿಕೊಂಡು ಬರುವುದಕ್ಕೆ ಹೇಳುತ್ತಾರೆ. ಪುನಃ ಬಿ.ಡಿ.ಒ. ಕಡೆಗೆ ಹೋಗಬೇಕಾಗುತ್ತದೆ. ಈ ರೀತಿಯಾಗಬಾರದು. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆ ತಪ್ಪಿಸಲು ಮಾರ್ಕೆಟ್ಟಿನಲ್ಲಿ ದೊರೆಯುವುದನ್ನು ಅರ್ಜಿ ಮಾಡಿದವನು ತೆಗೆದುಕೊಳ್ಳಲು ಅಪೇಕ್ಷೆ ಪಟ್ಟರೆ ಅದನ್ನು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಇಂಥ ಸಣ್ಣ ವಿಚಾರದಲ್ಲಿ ಡಿಲೇ ಮಾಡುವುದು ಸರಿಯಲ್ಲ. 5 ಎಚ್. ಪಿ. ಮೆಷಿನ್ನಿಗೆ 2,200 ರಿಂದ 2,300 ರೂ.ವರೆಗೆ ಅಂದಾಜು ಮಾಡಿದ್ದಾರೆ. ಇನ್‌ಸಿಡೆಂಟಲ್ ಚಾರ್ಜಸ್, ಟ್ರಾನ್ಸ್‌ಪೋರ್ಟೇಷನ್ ಇದಕ್ಕಾಗಿ 700 ರೂ. ಒಂದು ಸೆಟ್ಟಿಗೆ ಚಾರ್ಜು ಮಾಡುತ್ತಾರೆ. ಒಂದು ಪಂಪುಸೆಟ್ಟಿಗೆ 200-300 ರೂಪಾಯಿ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಖರ್ಚಾಗುತ್ತದೇನು ? ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತರಿಗೆ ಭಾರವಾಗುತ್ತದೆ ಎಂದು ಹೇಳುತ್ತೇನೆ. ಇದಲ್ಲದೆ ಎಲ್ಲ ಜಿಲ್ಲೆಗಳಿಗೆ ಸಮವಾಗಿ ಹಂಚಬೇಕಾದುದು ಸರಕಾರದ ಆದ್ಯ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ ಹೇಳುವುದಾದರೆ ನಮ್ಮ ಪ್ರದೇಶದಲ್ಲಿ ಹಳ್ಳಿಗಳಲ್ಲಿ ಬೆಳಕು ಕಂಡಿಲ್ಲ. ತುಂಗಭದ್ರಾದಿಂದ ಬೆಳಕು ಅಲ್ಲಲ್ಲಿ ಬಂದಿದೆ. ಹಳ್ಳಿಗಳಿಗೆ ಬೆಳಕು ಕೊಡುತ್ತಾರೆ ಎಂದು ಆಶೆ ಮೂಡಿದೆ. ಅನೇಕ ಗ್ರಾಮಗಳು ಇದನ್ನು ತೆಗೆದುಕೊಳ್ಳಲು ತಯಾರಾಗಿವೆ. ಗ್ರಾಮಾಂತರ ಪ್ರದೇಶದಲ್ಲಿ ಲೈಸೆನ್ಸ್ ಕೊಡಬೇಕು. ಪಟ್ಟಣಗಳಿಗೆ ಮಾತ್ರ ಕೊಡುವುದು ಸರಿಯಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಸ್ಯಾಂಕ್ಷನ್ ಮಾಡಬೇಕು. ಇವತ್ತಿನ ದಿವಸ ಈ ಕೆಲಸ ಪ್ರಾರಂಭವಾಗಬೇಕಾಗಿದೆ. ಇನ್ನೂ ಪ್ರಾರಂಭವಾಗಿಲ್ಲ ಮೆಟೀರಿಯಲ್ಸ್ ಇಲ್ಲ, ವೈರ್ ಇಲ್ಲ ಎಂದು ಹೇಳುತ್ತಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಇಲ್ಲಿ ಇನ್‌ವೆಸ್ಟಿಗೇಶನ್ ಡಿವಿಜನ್ ಹೆಚ್ಚು ಮಾಡಬೇಕು. ಎಲ್ಲಿ ಸ್ಯಾಂಕ್ಷನ್ ಆಗಿದೆಯೋ ಅಲ್ಲಿ ಕನ್‌ಸ್ಟ್ರಕ್ಷನ್ ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಕೆಲವು ಕಡೆ ಸರಿಯಾದ ಸ್ಟಾಫ್ ಇಲ್ಲ. ಸ್ಟಾಫ್ ಹೆಚ್ಚು ಮಾಡಬೇಕು. ಕೆಲಸ ತೀವ್ರಗತಿಯಿಂದ ಮಾಡುವಂತೆ ವ್ಯವಸ್ಥೆ ಮಾಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ. ಕೆಲವು ಕಡೆ ಇಂಡಸ್ಟ್ರೀಸ್ ಇವೆ. ಅಲ್ಲಿ ವಿದ್ಯುಚ್ಛಕ್ತಿ ಪೂರೈಸುತ್ತಿದ್ದಾರೆ. ಹಟ್ಟಿ ಪ್ರೊಜೆಕ್ಟಿನಿಂದ ಉತ್ಪತ್ತಿ ಬರುತ್ತಾ ಇದೆ. ವಿದ್ಯುಚ್ಛಕ್ತಿ ಪೂರೈಸಿದ ಕಡೆ ಬ್ರೇಕ್‌ಡೌನ್ ಆದಮೇಲೆ ನಾಲ್ಕೈದು ಗಂಟೆಯಿಂದ ಹತ್ತುಗಂಟೆಯವರೆಗೆ ಕರಂಟ್ ಬರುವುದಿಲ್ಲ. ಇದರಿಂದ ಬಹಳ ನಷ್ಟವಾಗುತ್ತದೆ. ಇದನ್ನು ಆಲೋಚನೆ ಮಾಡಿ ಅನನುಕೂಲವಾಗದಂತೆ ನೋಡಿಕೊಳ್ಳಬೇಕು ಮತ್ತು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನನಗೆ ನಾಲ್ಕು ಮಾತು ಹೇಳುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ವಿದ್ಯುಚ್ಛಕ್ತಿ ಮಂಡಲಿಯ ಆಡಳಿತ ನಮ್ಮ ಮೈಸೂರು ರಾಜ್ಯದ ಆಡಳಿತ ಎಷ್ಟು ವಿಚಿತ್ರವಾಗಿದೆಯೋ ಇದರ ಆಡಳಿತವೂ ಅಷ್ಟೇ ವಿಚಿತ್ರವಾಗಿದೆ

ನಮ್ಮಲ್ಲಿರತಕ್ಕ ಆ ಖಾದೀ ಬೋರ್ಡಿನಲ್ಲೇ ಕೋಟಿಗಟ್ಟಲೆ ಹಣ ಹೋಗಿರತಕ್ಕದ್ದು ಎಂಬುದಾಗಿ ಒಂದು ಪ್ರತೀತಿಯಾಗಿದ್ದಾಗ ನಾವು ಅಷ್ಟೇ ಎಂತ ಇದ್ದಾಗ ಇದರಲ್ಲಿ ನೋಡಿದರೆ ಇದಿನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವಂತೆ ಕಾಣುತ್ತಿದೆ. ಹೀಗಿರುವಾಗ ಇಲ್ಲಿಯವರೆಗೂ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಇದನ್ನೂ ಉತ್ತಮಪಡಿಸಬೇಕು, ಹೆಚ್ಚು ಪವರನ್ನು ಉತ್ಪಾದನೆ ಮಾಡಬೇಕು ಎಂಬುದಾಗಿ ಹೇಳಿದ್ದಾರೆ ಆದರೆ ಅದನ್ನು ಹೇಗೆ ಮಾಡಬೇಕು, ಅದಕ್ಕೆ ಹಣವನ್ನು ಎಲ್ಲಿಂದ ತರಬೇಕು ಎಂಬುದನ್ನು ಪರಿಶೀಲನೆ ಮಾಡದೆ, ಇದನ್ನು ಕೈಗಾರಿಕೆಗೂ ಕೊಡಬೇಕು, ಹಣ ಸುಡುವುದಕ್ಕೆ ಕೊಡಬೇಕು, ದೋಸೆ ಹಾಕುವುದಕ್ಕೆ ಕೊಡಬೇಕು, ಚಟ್ನಿ ಅರೆಯುವುದಕ್ಕೆ ಕೊಡಬೇಕು, ಇದನ್ನು ಹೇಗೆ ಉಪಯೋಗ ಮಾಡಬೇಕು, ಅದಕ್ಕೆ ಹೇಗೆ ಉಪಯೋಗ ಮಾಡಬೇಕು, ಇದಕ್ಕೆ ಹೇಗೆ ಉಪಯೋಗ ಮಾಡಬೇಕು ಎಂಬುದಾಗಿ ಎಲ್ಲರೂ ಹೇಳತಕ್ಕವರೆ! ಆದರೆ ಇದಕ್ಕೆಲ್ಲಾ ಹಣವನ್ನು ಕೊಡತಕ್ಕವರು ಯಾರು? ಇಲ್ಲಿಯತನಕ ನಾವು ಈ ಬೋರ್ಡಿನವರಿಗೆ ಕೊಡತಕ್ಕ ಹಣವನ್ನು ಅವರು ಸರಿಯಾಗಿ ಉಪಯೋಗಮಾಡಿದ್ದಾರೆಯೇ ಎಂಬುದನ್ನು ಯಾರು ಕೇಳಿದ್ದಾರೆ? ಈ ಬೋರ್ಡಿನ ವ್ಯವಹಾರಗಳನ್ನು ಪರಿಶೀಲನೆ ಮಾಡಿರತಕ್ಕ ಆ ಆಡಿಟರೂ ಮತ್ತು ಆಡಿಟರ್ ಜನರಲ್ ರವರೂ ಮತ್ತು ಆದಾದ ನಂತರ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಮತ್ತು ಇಲ್ಲಿ ಈ ಸಭೆಯವರೂ ಎಲ್ಲರೂ ಈ ಬೋರ್ಡ್ ಹಣವನ್ನು ದುರುಪಯೋಗ ಮಾಡುತ್ತಿದೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದಾಗಿ ಹೇಳಿದ್ದಾಗ್ಯೂ ಇದನ್ನು ಸರಿಪಡಿಸತಕ್ಕವರು ಯಾರು ಇದ್ದಂತೆ ಕಾಣುತ್ತಿಲ್ಲ. ಈ ಒಂದು ಬೋರ್ಡಾದರೂ ಹೇಗೆ ಜನ್ಮತಾಳಿತು ಎಂಬುದನ್ನು ನೋಡಿದರೆ ಅದಿನ್ನೂ ವಿಚಿತ್ರವಾಗಿದೆ. ಈ ಹಿಂದೆ 1949ರಲ್ಲಿ ಈ ಬೋರ್ಡನ್ನು ಅನೆಂಪ್ಲಾಯಿಡ್ ಆಗಿದ್ದ ಪೊಲಿಟಿಕಲ್ ಲೀಡರುಗಳಿಗೆ ಸ್ಥಾನ ದೊರಕಿಸಲು ಕೇಂದ್ರ ಸರ್ಕಾರದವರು ಇಂಥ ಒಂದು ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಹೇಳಿದ್ದಾರೆ ಎಂಬುದಾಗಿ ಅವರಮೇಲೆ ಒಂದು ನೆಪವನ್ನು ಹಾಕಿಕೊಂಡು ಈ ಒಂದು ಬೋರ್ಡನ್ನು ಸ್ಥಾಪನೆಮಾಡಲಾಯಿತು. ಆ ದಿವಸವೇ ನಾವು ಇದೇ ಸ್ಥಳದಿಂದ ಇದನ್ನು ರಚನೆ ಮಾಡುತ್ತಿದ್ದೇವೆ ಮುಂದೆ ಈ ವ್ಯವಹಾರ ಇನ್ನೂ ಅವ್ಯವಸ್ಥೆ ಆಗುತ್ತದೆ ಎಂದು ಹೇಳಿದ್ದೇವೆ. ಆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಯಾವ ಯಾವ ಬೋರ್ಡುಗಳನ್ನು ರಚನೆಮಾಡಬೇಕೆಂದು ಹೇಳಿದ್ದರೋ ಆ ಬೋರ್ಡುಗಳೆಲ್ಲವೂ ಇಲ್ಲ ಕುಸಿದು ಬಿದ್ದು ಬಹಳ ನಿರ್ವೀರ್ಯದಿಂದ ಯಾವ ಕೆಲಸಕ್ಕೂ ಬಾರದಂಥ ಸಂಸ್ಥೆಗಳಾಗಿವೆ. ಅವುಗಳಿಗೆ ಕೊಟ್ಟಿರತಕ್ಕ ದುಡ್ಡೆಲ್ಲಾ ಹೋಗಿಬಿಟ್ಟಿದೆ. ಮೈಸೂರು ರಾಜ್ಯದಲ್ಲಿ ಸ್ಥಾಪನೆಯಾಗಿರತಕ್ಕ ಯಾವ ಬೋರ್ಡನ್ನೇ ತೆಗೆದುಕೊಂಡರೂ—ಖಾದೀ ಬೋರ್ಡ್ ನೋಡಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಯಲ್ ಬೋರ್ಡನ್ನು ನೋಡಲಿ, ಆ ಹ್ಯಾಂಡೀಕ್ರಾಫ್ಟ್ಸ್ ಬೋರ್ಡನ್ನು ನೋಡಲಿ ಈ ಎಲೆಕ್ಟ್ರಿಸಿಟಿ ಬೋರ್ಡ್ ನೋಡಲಿ ಯಾವುದನ್ನು ನೋಡಿದರೂ ಒಂದರಲ್ಲೂ ವ್ಯವಹಾರಗಳು ನ್ಯಾಯವಾದ ರೀತಿಯಲ್ಲಿ ನಡೆಯುತ್ತಿಲ್ಲ. ಹೀಗೆ ರೈತರಿಂದ ವಸೂಲ್ಮಾಡಿದ ಹಣವನ್ನು ಮನಸ್ವಿಯಾಗಿ ನೀರಿನಂತೆ ಖರ್ಚುಮಾಡುತ್ತಾ ಇನ್ನೊಂದು ಕಡೆ ರೈತನಮೇಲೆ ನೂರಕ್ಕೆ ನೂರುಪಾಲು ಕಂದಾಯವನ್ನು ಏರಿಸುತ್ತಿದ್ದಾರೆ. ಈ ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಇದಕ್ಕೆ ಕೊಡತಕ್ಕ ಕಂದಾಯವನ್ನು ನೂರಕ್ಕೆ ನೂರು ಜಾಸ್ತಿ ಮಾಡಿದರೆ ಆ ಹಣವನ್ನು ಅವರು ಮತ್ತೊಂದು ಕಡೆ ಇನ್‌ವೆಸ್ಟ್ ಮಾಡಿದರೆ ಅದರಿಂದ ಇನ್ನೂ ಹೆಚ್ಚಿನ ಬಡ್ಡಿಯನ್ನು ದುಡಿಯಬಹುದು, ಎಂಬ ಇವರ ಆಲೋಚನೆಗಳೆಲ್ಲಾ ಗಾಳೀ ಗೋಪುರದಂತಾಗಿದೆ. ಈ ಸರ್ಕಾರಕ್ಕಾದರೋ ಇದರ ಪ್ರತಿಯೊಂದು ಅಂಗವೂ ಕುಷ್ಟರೋಗ ಹಿಡಿದು ನರಳುತ್ತಿರುವುದರಿಂದ ಇದು ಪ್ರಾರಂಭ ಮಾಡತಕ್ಕ ಯಾವ ಒಂದು ಬೋರ್ಡೂ ಇಲ್ಲಿ ಉಳಿಯುವುದಕ್ಕೆ ಆಗಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗಲಿ ಅವಕಾಶವಿಲ್ಲ. ಆದುದರಿಂದ ಈ ಎಲೆಕ್ಟ್ರಿಸಿಟಿ ಬೋರ್ಡನ್ನು ಕೂಡಲೆ ಸ್ಕ್ರ್ಯಾಪ್ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಮಾತನಾಡಿದ ಶ್ರೀಮಾನ್ ಕೆ. ಪಿ. ರೇವಣಸಿದ್ದಪ್ಪನವರು ಇಲ್ಲಿ 14-15 ಜನರು ಡೆಪ್ಯುಟಿ ಮಿನಿಸ್ಟರುಗಳಿದ್ದಾರೆ, ಅವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ, ಸಹಕಾರ ಸಚಿವರಿಗೆ ಸಹಕಾರ ಖಾತಿನ ಉಪಮಂತ್ರಿಗಳನ್ನು ಕಂಡರಾಗುವುದಿಲ್ಲ, ಹೀಗಿರುವಾಗ ಆ ಮಂತ್ರಿಗಳೇಕೆ ಕೆಲಸವನ್ನು ಬಿಡಬಾರದು? ಎಂಬುದಾಗಿ ಕೇಳಿದರು.

ಅಧ್ಯಕ್ಷರು.—ನಿಮಗೆ ಹಾಗೆಂದು ಯಾರು ಹೇಳಿದರು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಜನ ಮಂತ್ರಿಗಳಿಗೂ ಮತ್ತು ಉಪಮಂತ್ರಿಗಳಿಗೂ ಏನು ಕೆಲಸವಿದೆ? ಹೀಗೆ ಜನ ಜಾಸ್ತಿಯಾದುದರಿಂದಲೇ ಈ ವರದಿಯಲ್ಲಿ ಬರೆದಿರತಕ್ಕದ್ದರಲ್ಲಿ ನೂರಕ್ಕೆ 95 ಸತ್ಯಕ್ಕೆ ದೂರವಾದ ಅಂಶಗಳಿವೆ ಎಂಬುದನ್ನು ನಾನು ತೋರಿಸಿ ಕೊಡಬಲ್ಲೆ. ಆದರೆ ನನಗೆ ಸಾಕಷ್ಟು ಕಾಲಾವಕಾಶವನ್ನು ಮಾತ್ರ ಕೊಡಬೇಕು. ಇಲ್ಲಿ ಎಲ್ಲರೂ ಕೇಳುತ್ತಾರೆ—ಹಣವನ್ನು ಸುಡುವುದಕ್ಕೂ ಕೂಡ ಎಲೆಕ್ಟ್ರಿಸಿಟಿ ಬೇಕು ಅಂತ, ಆದರೆ ರೈತ ಕೊಡತಕ್ಕ ದುಡ್ಡನ್ನು ಜೋಪಾನ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡತಕ್ಕವರು ಯಾರು ಎಂಬುದನ್ನು ಮಾತ್ರ ಯಾರೂ ಹೇಳಲಿಲ್ಲ. ಬೆಳಗೆದ್ದರೆ ಇದಕ್ಕೆ ಡಿಬೆಂಚರು
ಗಳನ್ನು ರೈಜ್‌ಮಾಡಿದ್ದೂ ಮಾಡಿದ್ದೇ. ಈ ಬೋರ್ಡಿಗೆ ಇಲ್ಲಿ ಒದಗಿಸತಕ್ಕ ಹಣವೂ ಸಾಲದೆಂದು
ಇದಕ್ಕೆ ಕೇಂದ್ರ ಸರ್ಕಾರದಿಂದ ಸಾಲ ಬೇರೆ ಎತ್ತಿದ್ದಾರೆ ಇಷ್ಟೆಲ್ಲಾ ಮಾಡಿ ಆ ಹಣವನ್ನು ಈ ಬೋರ್ಡಿ
ನವರು ಯಾವ ಕೆಲಸಕ್ಕೆ ಉಪಯೋಗಮಾಡಿದ್ದಾರೆಂದರೆ ಅವರು ಅದನ್ನು ಬೇರೊಂದು ಬ್ಯಾಂಕಿನಲ್ಲಿ
ಇನ್‌ವೆಸ್ಟ್ ಮಾಡಿದ್ದಾರೆ. ಈ ಬೋರ್ಡಿನವರು ಏಳೂವರೆ ಪರ್ಸೆಂಟಿನಂತೆ ಬಡ್ಡಿಗೆ ಹಣವನ್ನು
ಪಡೆದು ಅದನ್ನು ಬ್ಯಾಂಕಿನಲ್ಲಿ ನಾಲ್ಕೂವರೆ ಪರ್ಸೆಂಟಿಗೆ ಇನ್‌ವೆಸ್ಟ್ ಮಾಡಿದ್ದಾರೆ. ಹೀಗಾದರೆ
ಈ ಬೋರ್ಡು ಉಳಿಯುತ್ತದೆಯೇ? ಅದಕ್ಕಾಗಿ ನಾನು ಈ ಬೋರ್ಡೆ ಬೇಡ ಎಂದು ಹೇಳು
ತ್ತಿರುವುದು. ಇನ್ನು ಖಾದೀ ಬೋರ್ಡಿನ ವ್ಯವಹಾರವಾದರೋ ಅಲ್ಲಿ ಕಣ್ಣು ಮೂಗು ಎರಡನ್ನೂ
ಬಿಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ. ಅಷ್ಟು ದುರ್ನಾತ ಅದಕ್ಕೇನು ಉತ್ತರ ಹೇಳುತ್ತಾರೆ
ಸರ್ಕಾರದವರು? ಅದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಬೇರೆ ಕಠಿಣವಾದ ವರದಿಯನ್ನು
ಕೊಟ್ಟಿದ್ದಾರೆ. ಇಷ್ಟೆಲ್ಲಾ ಹಣವನ್ನು ಒಂದು ಕಡೆ ದುರ್ವಿನಿಯೋಗ ಮಾಡುತ್ತಿರುವಾಗ ಇನ್ನೊಂದು
ಕಡೆ ಆ ರೈತನೇನಾದರೂ ಕೊಡತಕ್ಕ ಕಂದಾಯದಲ್ಲಿ ಒಂದು ರೂಪಾಯಿ ಕೊಡದೆ ಹೋದರೆ ಆತನ
ಹೆಂಡತಿಯ ಕೊರಳಲ್ಲಿರತಕ್ಕ ಮಾಂಗಲ್ಯವನ್ನು ಮಾರಿಸಿ ಆಕೆಯ ಕೊರಳಿಗೆ ಅರಿಸಿನದ ಬೊಟ್ಟನ್ನು
ಕಟ್ಟಿಸುತ್ತಾರೆ. ಹೀಗೆ ಗಳಿಸತಕ್ಕ ಹಣವನ್ನು ಹೀಗೆಲ್ಲಾ ದುರ್ವಿನಿಯೋಗ ಮಾಡಿ ಇದಕ್ಕೆ ನಿಮ್ಮ
ಒಪ್ಪಿಗೆ ಕೊಡಿ ಎಂದು ಕೇಳತಕ್ಕದ್ದು ಸರಿಯೇ? ಈ ಬೋರ್ಡಿನಲ್ಲಿ ಕೋಮುವಾರು, ಜಾತೀಯತ
ವಾದ ತುಂಬಿ ತುಳುಕುತ್ತಿದೆ. ಆದ್ದರಿಂದ ಸರ್ಕಾರದವರು ಇದನ್ನು ಕೂಡಲೇ ಅಬಾಲಿಸ್ ಮಾಡ
ಬೇಕು ಎಂದು ಹೇಳುತ್ತೇನೆ. ಈ ಬೋರ್ಡಿನಲ್ಲಿ ರಾಜಕೀಯ ಬೇರೆ ತನ್ಮಯವಾಗಿದೆ. ಈಗತಾನೆ
ಮಾತನಾಡಿದ ಶ್ರೀಮತಿ ಬಸವರಾಜೇಶ್ವರಿಯವರು ವಿದ್ಯುಚ್ಛಕ್ತಿಯನ್ನು ಹಂಚತಕ್ಕ ವಿಚಾರದಲ್ಲಿ
ತುಮಕೂರಿಗೆ ಅಷ್ಟು ಸಾವಿರ ಪಂಪ್‌ಸೆಟ್‌ಗಳಿಗೆ ಪವರನ್ನು ಕೊಟ್ಟಿದ್ದಾರೆ. ಕೋಲಾರಕ್ಕೆ ಇಷ್ಟು
ಸಾವಿರ ಪಂಪ್‌ಸೆಟ್‌ಗಳಿಗೆ ಪವರನ್ನು ಕೊಟ್ಟಿದ್ದಾರೆ, ಇನ್ನುಳಿದ ಹೊಸ ಮೈಸೂರು ರಾಜ್ಯಕ್ಕೆ ಕೇವಲ
ಹತ್ತಾರಕ್ಕೆ ಮಾತ್ರ ಕೊಟ್ಟಿದ್ದಾರೆ, ಎಂದು ಹೇಳಿದರು. ಆದರೆ ಇಂಡಿಯಾ ದೇಶದಲ್ಲಿ ಎಲ್ಲಿಯೂ
ಈ ವಿದ್ಯುಚ್ಛಕ್ತಿಯನ್ನು ತಯಾರು ಮಾಡದೆ ಇದ್ದಂಥ ಕಾಲದಲ್ಲೇ ಇದನ್ನು ನಮ್ಮ ಹಳೇ ಮೈಸೂರಿ
ನಲ್ಲಿ ತಯಾರಿಸಿ ಅಲ್ಲಿಂದ ಇಲ್ಲಿಯವರೆಗೂ ಇದನ್ನು ಬಳಸಲಾಗುತ್ತಿದೆ. ಆದರೆ ಇತ್ತೀಚೆಗೆ ರಾಜ್ಯ
ವಿಶಾಲವಾದಮೇಲೆ ಹೊಸ ಮೈಸೂರಿನವರು ನಮ್ಮ ಬಾಯಿಗೆಲ್ಲಾ ಕುಕ್ಕೆಹಾಕಿ ನಮ್ಮನ್ನು ಕೆಳಕ್ಕೆ
ತಳ್ಳಿ ಅವರು ಕೋಟ್ಯಾಂತರ ರೂಪಾಯಿಗಳನ್ನು ಅವರ ಭಾಗಕ್ಕೆ ಬಳಸಿರುತ್ತಾರೆಂದು ಹೇಳಿದರೆ
ಅದಕ್ಕೆ ಅವರೇನು ಹೇಳುತ್ತಾರೆ? ರಾಜ್ಯದಲ್ಲಿ ಒಂದು ಭಾಗ ಹಿಂದುಳಿದಿದ್ದರೆ ಅದಕ್ಕೆ ಕೇಂದ್ರ
ದವರಿಂದ ದುಡ್ಡನ್ನು ತಂದು ಅದನ್ನು ಅಭಿವೃದ್ಧಿಮಾಡಲಿ ಬೇಡವೆನ್ನುವುದಿಲ್ಲ, ಅದಕ್ಕೆ ಆ ಜನರಿಂದ
ಬೇಕಾದಂತೆ ಟ್ಯಾಕ್ಸನ್ನು ಹಾಕಿ ವಸೂಲ್ಮಾಡಲಿ ಯಾರು ಬೇಡ ಎನ್ನುತ್ತಾರೆ? ಅಷ್ಟನ್ನು ಮಾಡದೆ
ಈಗಾಗಲೇ ಮುಂದುವರಿದಿರತಕ್ಕ ರಾಜ್ಯವನ್ನು ಹಿಂದಕ್ಕೆಳೆಯುವುದಕ್ಕೆ ಪ್ರಯತ್ನ ಮಾಡಿದರೆ ನಾವು
ಸುಮ್ಮನಿರುವುದಕ್ಕಾಗುವುದಿಲ್ಲ. ಆದರೆ ಈ ಹಿಂದೆ ಮಾತನಾಡಿದ ಅನೇಕ ಮಾನ್ಯ ಸದಸ್ಯರು
ಈ ಬೋರ್ಡು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇಲ್ಲಿಯವರೆಗಾದರೂ ಇದನ್ನು
ಒಂದು ಸುವ್ಯವಸ್ಥೆಗೆ ತರಲು ಯಾರಾದರೂ ಪ್ರಯತ್ನಮಾಡಿದ್ದಾರೇನು? ಮಾತೆತ್ತಿದರೆ ಆ ಮದ್ರಾಸಿ
ನಲ್ಲಿ ಹಾಗೆ ಮಾಡಿದ್ದಾರೆ, ನೀವೇಕೆ ಇಲ್ಲಿ ಅದೇ ರೀತಿಮಾಡಬಾರದು ಎಂದು ಪ್ರಶ್ನೆ ಹಾಕುತ್ತಿದ್ದಾರೆ.
ನಾವು ಊಟಕ್ಕೆ ಕುಳಿತಿದ್ದಾಗ ತುತ್ತನ್ನು ಬಾಯಿನಲ್ಲಿ ಇಟ್ಟುಕೊಳ್ಳಬೇಕು ಎನ್ನುವಾಗ ಈ ದೀಪ
ಗಳು ಹೋಗಿ ಬಿಡುತ್ತವೆ. ಆಗ ನಾವು ಹೊಟ್ಟೆಗೆ ಹುಳ ಉಪ್ಪಡೆ ಏನುಬೇಕಾದರೂ ಆ ಕತ್ತಲೆ
ಯಲ್ಲಿ ತಿಂದು ಬಿಡಬಹುದು. ಇಲ್ಲಿ ಹೀಗಿದ್ದರೆ ಆ ಬೊಂಬಾಯಿನಲ್ಲಿ ಒಂದಾವರ್ತಿ ಲೈಟುಗಳು
ಷಟ್‌ಡೌನ್ ಆದ್ದಕ್ಕೆ ರಾಜ್ಯಾದ್ಯಾಂತದಲ್ಲಿದ್ದ ಜನರು ದೊಡ್ಡ ಗಲಾಟೆಯನ್ನೇ ಮಾಡಿದರು. ಅಲ್ಲಿ
ಹಾಗಿದ್ದರೆ ಇಲ್ಲಿ ಮೈಸೂರು ರಾಜ್ಯದಲ್ಲಿ ದಿನಕ್ಕೆ ನಾಲ್ಕೈದು ಸಾರ್ತಿ ಲೈಟುಗಳು ಷಟ್‌ಡೌನ್
ಆಗುತ್ತಿವೆ. ಯಾರೂ ಕೇಳುವವರೇ ಇಲ್ಲ.

ಅಧ್ಯಕ್ಷರು.—ನಿಮ್ಮ ಬಾಯನ್ನು 'ಷಟ್‌ಡೌನ್' ಮಾಡಲು ಯಾರಿಂದಾಗುತ್ತದೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಬಾಯನ್ನು ಷಟ್‌ಡೌನ್ ಮಾಡುವುದಕ್ಕಾಗದೇ ಇರ
ಬಹುದು. ಲೈಟ್ ಹೋದಾಗ ನಾವು ಬಾಯಲ್ಲಿ ಏನು ಹಾಕಿಕೊಳ್ಳುತ್ತೇವೆಂಬುದು ಹೇಗೆ
ಗೊತ್ತಾಗುವುದು? ಅಂಥ ವೇಳೆಯಲ್ಲಿ ನನ್ನ ಬಾಯಾದರೂ ಮುಚ್ಚದೇ ಏನಾಗುತ್ತದೆ?
Whatever it may be, I have just made up my mind to say that the
Board is not functioning satisfactorily. It has become a trading ager
It is there to make money.

Mr. SPEAKER.—Language is changed.

ಶ್ರೀ ಸಿ. ಜೆ. ಮುಕಣ್ಣಪ್ಪ.—ತಾವೇ ಒಂದು ಸಮಯದಲ್ಲಿ ಹೀಗೆ ಕನ್ನಡದಿಂದ ತುಳುವಿಗೂ ತುಳುವಿನಿಂದ ಕೊಂಕಣಿಗೂ, ಕೊಂಕಣಿಯಿಂದ ಇಂಗ್ಲೀಷಿಗೂ ಬದಲಾಯಿಸಬಹುದು ಎಂದು ಹೇಳೋಣವಾಗಿತ್ತು. ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ನಾನಾವ ಬೃಹಸ್ಪತಿ, ನಾನು ಕನ್ನಡದಲ್ಲೇ ಮಾತನಾಡುತ್ತೇನೆ.

ಅವರ ಹತ್ತಿರ ಲೆಕ್ಕ ಇಲ್ಲ ಎಂದು ಬರೆದಿದ್ದಾರೆ ಹಾಗಿದ್ದ ಮೇಲೆ ಈ ಎಲೆಕ್ಟ್ರಿಸಿಟಿ ಬೋರ್ಡನ್ನು ಏಕೆ ಇಟ್ಟುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ. ಬೀಡಿ ಅಂಗಡಿಯವನ ಹತ್ತಿರ ಕಮರ್ಷಿಯಲ್ ಟ್ಯಾಕ್ಸ್ ವಸೂಲು ಮಾಡುವುದಕ್ಕೋಸ್ಕರ ಲೆಕ್ಕ ಇದೆ, ನೆಶ್ಯದ ಅಂಗಡಿಯವನ ಹತ್ತಿರ ಲೆಕ್ಕ ಇದೆ, ಹೋಟೇಲ್‌ನವರ ಹತ್ತಿರ ಲೆಕ್ಕ ಇದೆ, ಇವರೆಲ್ಲರೂ ಲೆಕ್ಕ ಬರೆಯುತ್ತಾರೆ, ಆದರೆ ಈ ವಿದ್ಯುಚ್ಛಕ್ತಿ ಮಾರಾಟ ಮಾಡತಕ್ಕವರಲ್ಲಿ ಇಲ್ಲ. ಇವರು ಬರೆದಿದ್ದಾರೆ :

> "A register to keep a watch over the Demand, Collection and Balance was not maintained in the Bangalore City Area which is the larget single revenue earning unit. The reconciliation of balances to be effected as per rules between the Revenue Ledger and the Statement of Demand, Collection and Balance has not been done so far. (July 1962)."

1962ನೆಯ ಇಸವಿಯವರೆಗೂ ನಮ್ಮ ಹತ್ತಿರ ಲೆಕ್ಕಪತ್ರ ಸರಿಯಾಗಿಲ್ಲ ಎಂದರೆ ಈ ಮೂರು ವರ್ಷದೊಳಗೆ ಎಷ್ಟುಮಟ್ಟಿಗೆ ಇದು ಹದಗೆಟ್ಟಿದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

With regard to delay in Realisation of Revenue, the Committee have observed as follows :—

> "On 30th November, 1962 a sum of Rs. 122 lakhs was outstanding on account of supply of power out of which Rs. 1.06 lakhs were time-barred in five divisions even as on 31st March 1961."

Mr. SPEAKER.—From which District is that ?

Sri C. J. MUCKANNAPPA.—I do not know, Sir.

Sri G. V. GOWDA.—It is not in South Kanara.

Mr. SPEAKER.—I just wanted to know, because I read in the papers something.

ಇದು ಏನು ತೋರಿಸುತ್ತದೆ ಎಂದರೆ ತಾವು ಬೋರ್ಡಿಗೆ ಕೊಟ್ಟ ಹಣ ಮತ್ತು ಅವರ ವ್ಯವಹಾರದ ಮೇಲೆ ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ ಅದು ಸ್ಟ್ಯಾಟ್ಯೂಟರಿ ಬೋರ್ಡು, ಅಟಾನಮಸ್ ಬಾಡಿ ಎಂದು ಹೇಳುವುದು ಏನಿದೆ ಅದು ನ್ಯಾಯವಲ್ಲ. ನಿಜವಾಗಿಯೂ ಕೂಡ ಇದು ಯಾರಿಗೂ ಮರ್ಯಾದೆ ತರುವುದಲ್ಲ. ಆದ್ದರಿಂದ ಎಲೆಕ್ಟ್ರಿಸಿಟಿ ಬೋರ್ಡು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ. ಇದರ ಮೇಲೆ ಯಾರ ಹಿಡಿತವೂ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಸ್ಟೋರ್ಸ್‌ನಲ್ಲಿ ಸ್ಟಾಕ್ ಪೊಸಿಷನ್ ಯಾವ ರೀತಿ ಇದೆ ಎಂಬುದನ್ನು ನೋಡಿದ್ದೇ ಆದರೆ ಅವರು ಈ ರೀತಿ ಹೇಳಿದ್ದಾರೆ :

> "Stores and Stock—(i) In 4 Divisions stock verification was not conducted for two to five years."

ಕಂಬ ಇಲ್ಲ, ವೈರ್ ಇಲ್ಲ, ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಲಾರಿ ಇಲ್ಲ, ಚಕ್ರ ಇಲ್ಲ, ಟ್ಯೂಬ್ ಇಲ್ಲ- ಎರಡು ಮೂರು ವರ್ಷದಿಂದ ಸ್ಟಾಕ್ ಟೇಕಿಂಗೇ ಆಗಿಲ್ಲ ಎಂದರೆ ಇದು ನಿಜವಾಗಿಯೂ ನಾಚಿಕೆಗೇಡಿನ ಬದುಕು.

This is just like Mundhra dealings.

Mr. SPEAKER.—Which part of the Budget is that ?

Sri C. J. MUCKANNAPPA.—Should I not give a comparison, Sir ?

Mr. SPEAKER.—The Member is getting a little excited.

Sri C. J. MUCKANNAPPA.—I am not excited. Such being the case, I do not know how the ex-Chief Minister who is the present Finance Minister can have control over the finances of the State. ಒಂದು ಬ್ಯಾಂಕ್‌ನಲ್ಲಿ ಎಷ್ಟು ಹಣ ಆಗಿಂದಾಗ್ಯೆ ತೆಗೆದುಕೊಂಡಿತ್ತು ? ಬ್ಯಾಲೆನ್ಸ್ ಎಷ್ಟಿತ್ತು ? ವರ್ಷೇ ವರ್ಷೇ ಎಷ್ಟು ಖರ್ಚಾಯಿತು ಎಂಬ ಈ ಎಲ್ಲಾ ಲೆಕ್ಕ ಇರುತ್ತದೆ. ಆದರೆ ಇಷ್ಟು ದೊಡ್ಡ ವ್ಯವಹಾರ ಮಾಡತಕ್ಕ ಈ ಬೋರ್ಡಿನಲ್ಲಿ ಸ್ಟಾಕ್ ಚೇಕಿಂಗೇ ಇಲ್ಲ, ಬಂದ ಸಾಮಾನುಗಳನ್ನು ಅಕೌಂಟಿಗೇ ತೆಗೆದುಕೊಂಡಿಲ್ಲ ಎಂದರೆ ಇದು ನಿಜವಾಗಿಯೂ ಮುಂಧ್ರ ಲೆಕ್ಕದಂತೆ ಕಾಣುತ್ತದೆ. ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರಕ್ಕೂ ಮುಂಧ್ರ ವ್ಯವಹಾರಕ್ಕೂ ಏನೂ ವ್ಯತ್ಯಾಸವಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಕಣ್ಣು ತೆರೆದು ನೋಡಬೇಕು. ಮೊನ್ನೆ ತಾನೆ ಅಪೀಲ್ ಮಾಡಿಕೊಂಡೆ, ಸೌತ್ ಕೆನರಾದಲ್ಲಿ ಒಂದು ಸಣ್ಣ ಬ್ಯಾಂಕ್ 100 ರೂಪಾಯಿ ಹಾಕಿ ಒಂದು ನೂರು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಡಿಪಾಸಿಟ್ ಸೆಕ್ಯೂರಿಟಿ ಇಟ್ಟುಕೊಂಡು ವ್ಯವಹಾರ ಮಾಡುತ್ತಾ ಇದೆ ಎಂದ ಮೇಲೆ ಈ ಬೋರ್ಡು ಇಡೀ ದೇಶದ ವ್ಯವಹಾರವನ್ನೆಲ್ಲಾ ಮಾಡುತ್ತಾ ಇರುವಾಗ ಎಂತಹ ಮಾರ್ಗವನ್ನು ಅನುಕರಣೆ ಮಾಡಿದ್ದಾರೆ ಎಂಬುದನ್ನು ನಾವು ನೋಡಿದ್ದೇ ಆದರೆ—

> "Suppliers' claims aggregating Rs. 1,33,002 and relating to the period 1954-55 to 19,9-60 were shown as outstanding on 31st March, 1962 for want of advices of transfer."

ಏಕೆ ಹೇಳುತ್ತೇನೆ ಎಂದರೆ ಇವತ್ತು ಮೈಸೂರು ಸರ್ಕಾರದ ಟ್ರೆಜರಿಯಲ್ಲಿ ಹಣ ಹೋದರೆ ಲೆಕ್ಕ ಸಿಕ್ಕುವುದಿಲ್ಲ, ಎಲೆಕ್ಟ್ರಿಸಿಟಿ ಬೋರ್ಡಿನವರ ಹತ್ತಿರ ಸಾಮಾನುಗಳು ಎಷ್ಟಿವೆ ಎಂದರೆ ಅದಕ್ಕೆ ಲೆಕ್ಕ ಸಿಕ್ಕುತ್ತಾ ಇಲ್ಲ, ಎಲೆಕ್ಟ್ರಿಸಿಟಿ ಬೋರ್ಡು ಯಾವ ರೀತಿ ಕೆಲಸಕಾರ್ಯಗಳನ್ನು ಮಾಡುತ್ತಾ ಇದೆ ಎಂಬುದು ಗೊತ್ತಾಗುತ್ತಾ ಇಲ್ಲ. ಇದನ್ನೆಲ್ಲಾ ನೋಡಿದರೆ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ಬೋರ್ಡಿನವರ ಕೈಯ್ಯಲ್ಲಿ ಕೊಟ್ಟು ಅವರು ಹೀಗೆ ಕೆಲಸ ಮಾಡುತ್ತಾ ಹೋದರೆ ಇದು ಯಾವ ಸ್ಥಿತಿಗೆ ಬಂದೀತು ? ಇದರಿಂದ ಎಷ್ಟರ ಮಟ್ಟಿಗೆ ದೇಶಕ್ಕೆ ಅನುಕೂಲವಾಗತಕ್ಕ, ಕೆಲಸವಾಗುತ್ತದೆ ಎಂಬ ವಿಷಯದಲ್ಲಿ ಸಂದೇಹ ಬಂದಿದೆ.

The Report further says:

> "A sum of Rs. 9,52,291 relating to the period April 1955 to September 1957 was outstanding under 'Miscellaneous Deposits' in the accounts of the Central Stores, Bangalore and a further sum of Rs. 5,68,055 pertaining to the period August 1944 to March 1955 is yet to be taken to this head of account."

ಇದಕ್ಕಿಂತಲೂ ಬೇರೆ ಇನ್ನೊಂದು ಅವ್ಯವಸ್ಥೆಯಲ್ಲಿರುವ ಸಂಸ್ಥೆ ಯಾವುದಾದರೂ ಇದೆಯೇ ಎಂದು ಕೇಳುತ್ತೇನೆ. ಇದು ಒಂದು ವ್ಯಾಪಾರಿ ಸಂಸ್ಥೆ, ಜನತೆಗೆ ಇದರಿಂದ ಅನುಕೂಲವಾಗಬೇಕಾದ ಕೆಲಸಕಾರ್ಯಗಳು ಯಥೇಚ್ಛವಾಗಿ ಇವೆ. 54-55ರಿಂದ ಹಿಡಿದು 59-60ರ ವರೆಗೆ ಯಾವ ಹಣ ಎಷ್ಟಿದೆ, ಯಾವುದಕ್ಕೆ ಅಡ್ಜಸ್ಟ್ ಮಾಡಬೇಕು ಎಂಬುದು ಗೊತ್ತಿಲ್ಲದೇ ಹೋದರೆ ಈ ಎಲೆಕ್ಟ್ರಿಸಿಟಿ ಬೋರ್ಡು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದನ್ನು ತಾವು ಅರ್ಥಮಾಡಿಕೊಂಡರೆ ಅರ್ಥವಾಗುತ್ತದೆ.

Mr. SPEAKER.—My difficulty is, if your thought is broken, you will not be clear in your ideas. I would like to preserve it and not allow it to break.

ಹಣದ ವಿಷಯವಾಗಿ ಎಷ್ಟು ನಿರ್ಲಕ್ಷ್ಯದಿಂದ ಇದ್ದಾರೆ ಎಂಬುದಕ್ಕೆ ಇದು ಒಂದು ಉದಾಹರಣೆ. ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ :

"A sum of Rs. 5,68,055 pertaining to the period August 1944 to March 1955 is yet to be taken to this head of account."

ಇದು ಏನೋ ಅರ್ಥವಾಗುವುದಿಲ್ಲ. ಇದಕ್ಕೆ ಹೆಡ್-ಟೈಲ್ ಯಾವುದೂ ಇಲ್ಲ. ಇದ್ದಿದ್ದರೆ ಈ ದೇಶದ ಹಣವನ್ನು ಇಷ್ಟು ನಿರ್ಲಕ್ಷ್ಯದಿಂದ ಕಾಣುತ್ತಾ ಇರಲಿಲ್ಲ ಎಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಎಲೆಕ್ಟ್ರಿಸಿಟಿ ಬೋರ್ಡು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ, ಎಲೆಕ್ಟ್ರಿಸಿಟಿ ಬೋರ್ಡಿನ ಅವ್ಯವಹಾರದಿ ದ ರೈತನಿಗೆ ಯಾವ ಸಹಾಯ ದೊರೆಯಬೇಕೋ ಅದು ದೊರೆಯುತ್ತಾ ಇಲ್ಲ. ಆಹಾರ ಪದಾರ್ಥಗಳನ್ನು ಬೆಳೆಯತಕ್ಕ ರೈತನಿಗೆ ಯಾವುದೂ ಸಬ್ಸಿಡಿ ಇಲ್ಲ. ಹೀಗಿರುವಾಗ ಒಂದು ಕಾಸನ್ನೂ ಕೂಡ ಅವನಿಂದ ನಿರೀಕ್ಷಣೆ ಮಾಡದೇ ಅವನಿಗೆ ಎಲೆಕ್ಟ್ರಿಸಿಟಿ ಸಪ್ಲೈ ಮಾಡಬೇಕು ಹಾಗೆ ಮಾಡಿದರೆ ಅವನು ಹೆಚ್ಚು ಆಹಾರ ಬೆಳೆಯುತ್ತಾನೆ. ಅವನಿಗೆ ಹೆಚ್ಚು ಆಹಾರ ಬೆಳೆಯಬೇಕೆಂಬ ಹುರುಪು ಬರುತ್ತದೆ. ಆದ್ದರಿಂದ ವಿದ್ಯುಚ್ಛಕ್ತಿಯನ್ನು ಪಂಪ್ ಸೆಟ್‌ಗಳಿಗೆ ಸಪ್ಲೈ ಮಾಡಲು ಈ ಬೋರ್ಡಿಗೆ ತಾವು ಡೈರೆಕ್ಷನ್ ಕೊಡುತ್ತೀರಿ ಮತ್ತು ಈ ಬೋರ್ಡಿನ ಅವ್ಯವಹಾರಗಳನ್ನು ತಹಬಂದಿಗೆ ತರುತ್ತೀರಿ ಎಂದು ಹೇಳಿ ನಾನು ನಂಬಿದ್ದೇನೆ.

Mr. SPEAKER.—I suppose the heart is all right.

Sri C. J. MUCKANNAPPA.—My heart will never break. It is very sound, Sir.

Mr SPEAKER.—Before we proceed next, I want the question raised by Sri S. M. Krishna and others to be settled. They wanted to know how long we are going to sit in this session and what subjects to be discussed. May I request the Finance Minister to explain the position.

5-00 P.M.

Sri B. D. JATTI.—Sir, we may have to sit till the 21st to finish the important items of business......

Sri B. P. KADAM (Karwar).—We were definitely told that the House will adjurn on 17th. I am opposed to the extension. We have fixed up a number of engagements in the expectation that the House will close. It is not proper to extend the business of the House in his manner.

Mr. SPEAKER.—The matter has been dicussed and thrashed out between the leaders of parties. By common consent we have agreed to go on till 21st. Sri V. S. Patil of the party to which the Hon'ble Sri Kadam belongs was also there and he too agreed

Sri B. P. KADAM —My leader could not have agreed if it is to extend by six days or so in voilation of the assurance given by the Chair on the floor of the House on the 30th and 31st of last month.

Mr. SPEAKER.—I am putting the matter before the House. I cannot understand the Hon'ble member cutting across in this manner. I mentioned the matter in the morning and subsequently there has been some understanding. If every one of the 208 members has to insist that matters would have to be cut according to the tip of his nose, it is impossible. The matter has been put to the House. Those who do not find it convenient may make their own arrangements.

B. P. KADAM.—In that case democracy itself would be hard hit.

Mr. SPEAKER.—The Hon'ble member seems to think that he alone knows about democracy.

Sri B. P. KADAM.—Yes, Sir.

Mr. SPEAKER.—It is entirely a worng notion. If the Hon'ble member finds it inconvenient to attend and insists that the House should be adjourned on that account, is that democracy? As I understand, democracy is run by the vote of the majority. The member will have to adjust himself to the decision of the House.

Sri C. J. MUCKANNAPPA.—The Central Law Minister Mr. Sen does not think that democracy means merely majority of votes.

Sri B. D. JATTI.—We will have to sit till 21st. We have to complet three items, the Survey and Settlement Report which is before the House and the Resolution about the Electricity Board which is now under discussion. The Land Reforms Amendment Bill will have to be taken up. Then there is a small amendment to the Land Revenue Code. These three items will be finished on 21st and 22nd we can adjourn. That is the understanding arrived at after discussing the matter with the important persons on the other side.

Sri B. P. KADAM.—Who are not the important persons ?

Mr. SPEAKER.—I think that Sri V. S. Patil is one of the important persons. Does not Sri Kadam think so ?

Sri B. P. KADAM.—He has to take advice of others.

Mr. SPEAKER.—Then, Sri B. P. Kadam will have to complain against him.

Sri B. P KADAM.—I need not complain against him. He did not consult me. That is all what I meant.

Mr. SPEAKER.—There is absolutely no scope for making remarks of this kind. I thought the parties function in certain groups. I think the member belongs to a party for which there is a leader.

Sri N. O. SAMAJI (Belgaum II).—(Marathi)

Mr. SPEAKER.—Sri Kadam seems to think differently.

Sri B. P. KADAM.—He must consult all. It is not enough if he consults persons whom he thinks was near to him.

Mr SPEAKER.—I am not concerned with the nearness, height, depth of any Hon'ble member. I try to treat him as a member of a group of which Mr V. S. Patil is the leader. If he does not agree with his leader let him put it in writing and give it to me. I will put him in some other place.

Sri B. KADAM.—I respectfully stated that if at all such an important decision is to be taken every one must be consulted. We are not sitting here as school going urchin. We have our own engagements and programmes.

Mr SPEAKER.—I know that Sri Kadam has got the most important engagements in all the world. I did not take him to be an urchin. Why should he come to wrong conclusions ? If he thinks that he should have been consulted by his leader he might put in writing to me and I will pass it on to the leader with my best compliments. I suppose the House agrees to sitting till 21st. I will regularise everything by putting it before the Business Advisory Committee. I

have brought the matter before the House now so that the members my know well in advance. I did not expect this remark by the Hon'ble member. Perhaps it was wrong on my part not to have anticipated this.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಮ್ಮ ಮುಂದಿರತಕ್ಕ ಮೈಸೂರು ದೇಶದ ವಿದ್ಯುಚ್ಛಕ್ತಿ ಬೋರ್ಡಿನ ಆಡಳಿತದ ಬಗ್ಗೆ ಇದುವರೆಗೆ ಮಾತನಾಡಿದ ಸದಸ್ಯರು ಉಪಯುಕ್ತವಾದ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದೂಸ್ಥಾನದಲ್ಲಿ ಎಲ್ಲ ದೇಶಗಳಿಗಿಂತ ಮೊದಲೇ ಮೈಸೂರು 1902 ನೆಯ ಇಸವಿಯಲ್ಲೇ ವಿದ್ಯುಚ್ಛಕ್ತಿಯನ್ನು ಒದಗಿಸಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹಿಂದೆ ಉತ್ಪತ್ತಿಯಾದ ವಿದ್ಯುತ್ತನ್ನು ಕೋಲಾರದ ಚಿನ್ನದಗಣಿ ಮತ್ತು ಭದ್ರಾವತಿಯ ಕಬ್ಬಿಣದ ಕಾರ್ಖಾನೆಗೆ ಹೆಚ್ಚಾಗಿ ಒದಗಿಸುತ್ತಿದ್ದರು. ಈಗ ಶರಾವತಿಯಲ್ಲಿ ದೊಡ್ಡ ಯೋಜನೆ ಪ್ರಾರಂಭವಾದಮೇಲೆ ವಿದ್ಯುತ್ತನ್ನು ಮೊದಲು ದೊಡ್ಡ ಕೈಗಾರಿಕಗಳಿಗೆ ಒದಗಿಸಿ ನಂತರ ದೇಶದ ಜನರ ಉಪಯೋಗಕ್ಕೆ ಒದಗಿಸುತ್ತಾರೆಂಬ ಆಶೆ ಇತ್ತು. ಆದರೆ ಶರಾವತಿಯ ಮೊದಲನೆಯ ಯೂನಿಟ್ಟಿನಿಂದ ವಿದ್ಯುಚ್ಛಕ್ತಿ ಸರಬರಾಯಾಗುತ್ತಿದ್ದರೂ ಕೂಡ ಅದು ಸರಿಯಾಗಿ ಉಪಯೋಗವಾಗುತ್ತಿಲ್ಲ. ಏಕೆ ಹಾಗಾಗಿದೆ, ಅದಕ್ಕೆ ತೊಂದರೆಯೇನು ಎಂದು ತೀವ್ರವಾಗಿ ಪರ್ಯಾಲೋಚಿಸುವುದು ಬಹಳ ಅಗತ್ಯವಾಗಿದೆ.

ಸ್ವಾಮಿ, ಈಗ ನಮ್ಮ ದೇಶದ ಮಲೆನಾಡು ಪ್ರದೇಶದಲ್ಲಿ ಮತ್ತು ದೊಡ್ಡ ನೀರಾವರಿ ಯೋಜನೆಗಳಿಲ್ಲದಿರುವ ಕಡೆ ಭಾವಿಗಳನ್ನು ತೋಡಿ ಇರಿಗೇಷನ್ ಪಂಪುಸೆಟ್ಟಿನ ಸಹಾಯದಿಂದ ವ್ಯವಸಾಯ ಮಾಡಬೇಕಾಗಿದೆ. ಈಗಾಗಲೇ ಮಾತನಾಡಿದ ಅನೇಕರು ಈ ಆಯವ್ಯಯ ಪಟ್ಟಿಯನ್ನು ನೋಡಿದರೆ ಕೆಲವು ಜಿಲ್ಲೆಗಳಿಗೆ ಜಾಸ್ತಿ ಪಂಪುಸೆಟ್ಟುಗಳನ್ನು ಕೊಟ್ಟು ಮತ್ತೆ ಕೆಲವಕ್ಕೆ ಸಾಕಷ್ಟು ಕೊಟ್ಟಿಲ್ಲ ಎಂದು ಹೇಳಿದರು. ಆದರೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿರುವ ಸ್ಥಳಗಳಿಗೂ ಮತ್ತು ನೀರಾವರಿ ಯೋಜನೆಗಳಿಲ್ಲದಿರುವ ಜಿಲ್ಲೆಗಳಿಗೂ ಹೋಲಿಕೆಮಾಡುವುದು ಸರಿಯಲ್ಲ. ಸಮಗ್ರವಾಗಿ ದೇಶದ ರೈತರ ಹಿತದೃಷ್ಟಿಯಿಂದ ಪಂಪುಸೆಟ್ಟುಗಳನ್ನು ಕೊಟ್ಟರೆ ರೈತರಿಗೆ ಉಪಯೋಗವಾಗಿ ವ್ಯವಸಾಯಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಹಾಗೆ ಮಾಡುವುದು ನ್ಯಾಯವಾದುದು. ಆದರೆ ಸುಮಾರು ಎರಡುಮೂರು ವರ್ಷಗಳಿಂದ ಕೆಲವು ಕಡೆ ಟ್ರಾನ್ಸ್‌ಫಾರ್ಮರ್ ಇಲ್ಲವೆಂದು ಹೇಳಿ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ಹೀಗಾದರೆ ಬಾವಿಯಿಂದ ಸಹಾಯ ಪಡೆಯಲು ರೈತರಿಗೆ ತೊಂದರೆಯಾಗುತ್ತದೆ. 2-3 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬಾವಿ ತೆಗೆದಿರುವಾಗ ಅದರ ನೀರನ್ನು ಉಪಯೋಗಿಸಲು ವಿದ್ಯುಚ್ಛಕ್ತಿಯನ್ನೊದಗಿಸದಿದ್ದರೆ ಬಾವಿ ತೆಗೆದವರಿಗೇನು ಅನುಕೂಲವಾದಂತಾಯಿತು ? ಕೆಲವು ಕಡೆ ಟ್ರಾನ್ಸ್‌ಫಾರ್ಮರ್ ಇಲ್ಲವೆಂದು ಅಧಿಕಾರದಲ್ಲಿರುವವರು ಹೇಳುವಾಗ ಕೆಲವು ಜಿಲ್ಲೆಗಳಲ್ಲಿ ಬೇಕಾದಷ್ಟು ಟ್ರಾನ್ಸ್‌ಫಾರ್ಮರುಗಳು ಉಪಯೋಗವಿಲ್ಲದೆ ಬಿದ್ದಿರುತ್ತವೆ. ಎಲ್ಲಿ ರೈತರಿಗೆ ಅವಶ್ಯಕತೆ ಇದೆಯೆಂಬುದನ್ನು ನೋಡಿ ಅಲ್ಲಿಗೆ ಮೊದಲು ಕೊಡಬೇಕಾದ್ದು ನ್ಯಾಯವಾದುದು. ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದನ್ನು ನೋಡಿದರೆ 1959 ರಲ್ಲಿ ಇರಿಗೇಷನ ಪಂಪುಸೆಟ್ಟುಗಳಿಗಾಗಿ ಚಿಕ್ಕಮಗಳೂರು ಜಿಲ್ಲೆಯ ಮಲ್ಲೇನಹಳ್ಳಿಯಲ್ಲಿ 8-10ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದರೂ ಕೂಡ ಇನ್ನು ಕೆಲಸ ಪ್ರಾರಂಭಿಸಿಲ್ಲ; ಮಾಗುತಿಹಳ್ಳಿ, ಕೃಷ್ಣರಾಜಪೇಟೆ ಮುಂತಾದ ಕಡೆಗಳಲ್ಲಿ ರೈತರು ಹಣ ಕೊಟ್ಟು ಮುಂದ ಬಂದರೂ 5-6 ವರ್ಷಗಳಿಂದ ಕೆಲಸವಾಗದಿರುವುದು ಶೋಚನೀಯ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದಾದರೂ ಕೆಲಸವನ್ನು ಮಾಡಿಸಬೇಕಾದರೆ ಯಾರಾದರೂ ಪ್ರತಿಭಾವಂತರಿದ್ದರೆ ಕೆಲಸವಾಗಬಹುದು ಅಥವಾ ಹಗಲಿರುಳೂ ತಿರುಗಿದರೆ ಮಾತ್ರ ಕೆಲಸವಾಗಬಹುದು. ನ್ಯಾಯವಾಗಿ ಎಲ್ಲಿ ಕೆಲಸ ಆಗಬೇಕು ಎನ್ನುವುದನ್ನು ಆಯಾ ಇಲಾಖೆಯವರು ವಿಮರ್ಶೆ ಮಾಡದೆ ಹೋದರೆ ಜನಗಳಿಗೆ ಅನುಕೂಲವಾಗುವುದಿಲ್ಲ ಎಂದು ಅನಿವಾರ್ಯವಾಗಿ ತಿಳಿಸಬೇಕಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು ತಾಲ್ಲೂಕು ತುಮಕೂರು ವಿಭಾಗಕ್ಕೆಸೇರಿದೆ, ಚಿಕ್ಕಮಗಳೂರು ಹಾಸನ ವಿಭಾಗಕ್ಕೆ ಸೇರಿದೆ, ತರಿಕೆರೆ ಭದ್ರಾವತಿ ವಿಭಾಗಕ್ಕೆ ಸೇರಿದೆ. ಹೀಗೆ ಜಿಲ್ಲೆಯ ಐದು ಭಾಗವಾದ ಯಾವ ಕೆಲಸ ಆಗಬೇಕಾದರೂ ಐದು ವಿಭಾಗಗಳ ಇಂಜನಿಯರುಗಳನ್ನು ನೋಡಿ ಕೆಲಸ ಮಾಡಿಕೊಳ್ಳಬೇಕಾಗಿದೆ. ಇದರಿಂದ ರೈತನಿಗೆ ಬಹಳ ತೊಂದರೆಯಾಗಿ ಅವರು ಏನು ಕೆಲಸ ಮಾಡಿಕೊಳ್ಳಬೇಕಾದರೂ ಆಗುವುದಿಲ್ಲ. ಈ ವಿಷಯವನ್ನು ಸರ್ಕಾರದವರ ಗಮನಕ್ಕೂ ಮತ್ತು ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರ ಗಮನಕ್ಕೂ ತಂದರೂ ಸಹಿತ ಇದನ್ನು ಸರಿಪಡಿಸುವುದಕ್ಕೆ ಯಾರೂ ಪ್ರಯತ್ನ ಮಾಡಿಲ್ಲ. ಈ ದಿವಸ ಅದನ್ನು ಮತ್ತೊಮ್ಮೆ ತಿಳಿಯಪಡಿಸಬೇಕೆಂದಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯನ್ನು ಪ್ರತ್ಯೇಕವಾದ ಒಂದು ವಿಭಾಗವನ್ನಾಗಿಮಾಡಿದರೆ ಹಿಂದುಳಿದಿರತಕ್ಕ ಜಿಲ್ಲೆಯ ವ್ಯವಸಾಯಕ್ಕೂ ಮತ್ತು ಗ್ರಾಮಾಂತರ ಪ್ರದೇಶಗಳ ವಿದ್ಯುಚ್ಛಕ್ತಿಗೂ ಸಹಾಯ ಮಾಡಬೇಕೆಂದು ತಿಳಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ವೀರೇಂದ್ರಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯ ಪಟ್ಟಿಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೆಲವು ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಕಟುವಾಗಿಯೂ ಟೀಕಿಸಿದ್ದಾರೆ. ಇದೇನೂ ಹೊಸದಲ್ಲ. ಪ್ರತಿಯೊಂದುಸಲ ಯಾವುದೇ ವಿಷಯ ಚರ್ಚೆಗೆ ಬಂದಾಗಲೂ ನಡೆಯುವಂಥ ವಿಷಯವೇ ಈ ಸಲವೂ ನಡೆದಿದೆ. ವಿದ್ಯುಚ್ಛಕ್ತಿ ಮಂಡಲಿಯು ಚೆನ್ನಾಗಿ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ ಎಂದು ಕೆಲವು ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದಾರೆ. ಅಷ್ಟೇ ಅಲ್ಲದೆ ಈ ಸಭೆಯಲ್ಲಿ ಅನೇಕ ಸದಸ್ಯರು ತಮ್ಮ ತಮ್ಮ ಕ್ಷೇತ್ರದ ವಿಚಾರಗಳನ್ನು ಮುಂದಿಟ್ಟುಕೊಂಡು ವಿದ್ಯುಚ್ಛಕ್ತಿ ಮಂಡಲಿಯಿಂದ ಅವರವರ ಕ್ಷೇತ್ರಗಳಲ್ಲಿ ಅನ್ಯಾಯವಾಗಿದೆ, ಕೆಲಸ ಕಾರ್ಯಗಳು ಸಾಕಷ್ಟು ನಡೆಯುತ್ತಿಲ್ಲ, ಆ ಕ್ಷೇತ್ರವನ್ನು ಕಡೆಗಣಿಸಿದ್ದಾರೆ, ಎನ್ನುವ ಕೆಲವು ದೂರುಗಳು ಕೂಡ ನಮ್ಮ ಮುಂದೆ ಬಂದಿವೆ. 1956ಕ್ಕೆ ನಮ್ಮದು ಹೊಸ ರಾಜ್ಯವಾದ ಮೇಲೆ, ಬೊಂಬಾಯಿ ಭಾಗದಿಂದ ಮತ್ತು ಹೈದರಾಬಾದು ಭಾಗದಿಂದ ವಿಶೇಷವಾಗಿ ಬಂದಂಥ ಪ್ರದೇಶಗಳಲ್ಲಿ ಯಾವ ವಿದ್ಯುಚ್ಛಕ್ತಿ ಯೋಜನೆಗಳೂ ಇರಲಿಲ್ಲ. ಅದರಲ್ಲಿಯೂ ಜಲ ವಿದ್ಯುತ್ ಯೋಜನೆಗಳಂತೂ ಇರಲೇ ಇಲ್ಲ. ಅಲ್ಲಿ ದೊಡ್ಡ ದೊಡ್ಡ ಊರುಗಳಲ್ಲಿ ಡೀಸೆಲ್ ಸೆಟ್‌ಗಳನ್ನು ಹಾಕಿಕೊಂಡು ಅಲ್ಲಿನ ಮುನಿಸಿಪಾಲಟಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ ಮತ್ತು ಇವು ವಿಶೇಷವಾಗಿ ಖಾಸಗಿ ಜನರಿಂದ ನಡೆಸಲ್ಪಡುತ್ತಿವೆ. ಅದೇ ರೀತಿಯಾಗಿ ಹೈದರಾಬಾದ್ ಕರ್ಣಾಟಕದ ಮೂರು ಜಿಲ್ಲೆಗಳಲ್ಲಿಯೂ ಯಾವ ಜಲ ವಿದ್ಯುತ್ ಯೋಜನೆಯೂ ಆಗಲಿಲ್ಲ. ಥರ್ಮಲ್ ಪವರ್ ಆಗಲೀ ಇರಲಿಲ್ಲ. ನಮ್ಮ ರಾಜ್ಯ ದೊಡ್ಡದಾದ ಮೇಲೆ ಹೊಸ ಭಾಗಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂದು ವಿಚಾರ ಮಾಡಿದಾಗ ನಮಗೆ ವಿದ್ಯುಚ್ಛಕ್ತಿಯ ಕೊರತೆ ಹೆಚ್ಚಾಗಿ ಕಂಡುಬಂದಿತು. ದಿನದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುವಂಥ ಕೈಗಾರಿಕೆಗಳಿಗೆ ಮತ್ತು ಒಕ್ಕಲುತನದ ಸಲುವಾಗಿ ನೀರಾವರಿ ಪಂಪ್ ಸೆಟ್ಟುಗಳು ಮುಂತಾದವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕೆ ಸಾಧ್ಯವಾಗಲಾರದಂಥ ಪರಿಸ್ಥಿತಿ ಬಂತು. ಶರಾವತಿ ಯೋಜನೆಯಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗುವುದು ಸ್ವಲ್ಪ ತಡವಾದುದರಿಂದ ಇದ್ದ ವಿದ್ಯುಚ್ಛಕ್ತಿಯನ್ನು ಎಲ್ಲರಿಗೂ ಹಂಚಬೇಕಾದ ಪರಿಸ್ಥಿತಿ ಬಂದಿತು. ಆಗ ಸ್ಟಾಗರಿಂಗ್ ಮಾಡಬೇಕಾಯಿತು. ಇದರಿಂದಾಗಿ ಹೊಸದಾಗಿ ಬಂದಂಥ ಭಾಗಗಳಲ್ಲಿ ಹೆಚ್ಚಿನ ಮಟ್ಟದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಯಾರಾದರೂ ಆ ಭಾಗವನ್ನು ಕಡೆಗಾಣಿಸುತ್ತಿದ್ದಾರೆ ಎನ್ನುವ ವಿಚಾರ ಮಾಡುವಂಥದ್ದಲ್ಲ. ಪರಿಸ್ಥಿತಿ ಆ ರೀತಿ ಬಂದಿತ್ತು. ಈಗ ನಮಗೆ ಹೇರಳವಾಗಿ ವಿದ್ಯುಚ್ಛಕ್ತಿ ಬಂದಿದೆ. ಇದನ್ನು ಸರಿಯಾಗಿ ಹಂಚಲು ಎಲ್ಲ ಭಾಗಗಳಿಗೂ ಟ್ರಾನ್ಸ್‌ಮಿಷನ್ ಲೈನ್ ತೆಗೆದುಕೊಂಡು ಹೋಗಬೇಕು. ಟ್ರಾನ್ಸ್‌ಮಿಷನ್ ಲೈನ್ ಹಾಕದೆ ಹೋದರೆ ಶರಾವತಿಯಿಂದ ಬಂದಂಥ ವಿದ್ಯುಚ್ಛಕ್ತಿಯನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೆ ಹೋಗಬಹುದು. ಅದಕ್ಕಾಗಿ ನಾವು ಈಗ ಆ ಭಾಗ, ಈ ಭಾಗ, ಹಳೆ ಮೈಸೂರು, ಹೊಸ ಮೈಸೂರು ಎಂದು ನೋಡುವಂಥ ಪ್ರಶ್ನೆ ಇಲ್ಲ. ಮೈಸೂರಿನಲ್ಲಿ ಉತ್ಪತ್ತಿಯಾಗುವಂಥ ವಿದ್ಯುಚ್ಛಕ್ತಿಯನ್ನೆಲ್ಲ ಮೈಸೂರು ರಾಜ್ಯದಲ್ಲೇ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವಾಗ ಎಲ್ಲೆಲ್ಲಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಹೋಗಬೇಕಾದ್ದು ಅತ್ಯವಶ್ಯವಿದೆಯೋ ಅಲ್ಲೆಲ್ಲ ಅದನ್ನು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ನಿನ್ನೆ ಕೋಲಾರದ ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತ ವಿದ್ಯುಚ್ಛಕ್ತಿ ಮಂಡಲಿಯವರು ಹಳೇ ಮೈಸೂರಿಗೆ ಬಹಳ ಅನ್ಯಾಯ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದರು. ವಿದ್ಯುಚ್ಛಕ್ತಿ ಮಂಡಲಿಯು ಹಳೆ ಮೈಸೂರು, ಹೊಸ ಮೈಸೂರು ಈ ಎಲ್ಲ ಭಾಗಗಳಲ್ಲಿಯೂ ಒಂದೇ ರೀತಿಯಿಂದ ಖರ್ಚು ಮಾಡಬೇಕು ಎನ್ನುವ ಅಭಿಪ್ರಾಯಕ್ಕೆ ಬಂದರೆ ನಮಗೆ ದೊರಕುವಂಥ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಬೇಡಿ ಎಂದು ಹೇಳುವಂಥ ಪರಿಸ್ಥಿತಿ ಬರುತ್ತದೆ. ಎಲ್ಲ ಭಾಗಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹೊಸ ಭಾಗದಲ್ಲಿ ಟ್ರಾನ್ಸ್‌ಮಿಷನ್ ಲೈನ್ ಹಾಕಬೇಕಾಗಿದೆ. ಹಳೆ ಮೈಸೂರಿನಲ್ಲಿ ಈಗಾಗಲೇ ಟ್ರಾನ್ಸ್‌ಮಿಷನ್ ಲೈನ್ಸ್ ಹಾಕಿದ್ದಾರೆ. ಅಲ್ಲಿ ಈಗ ಡಿಸ್ಟ್ರಿಬ್ಯೂಟರಿ ಲೈನ್ಸ್ ಎಂದರೆ ಅಲ್ಲಲ್ಲಿ 11 ಕೆ. ವಿ. ಲೈನ್ ಹಾಕುವಂಥ ಪರಿಸ್ಥಿತಿ ಇದೆ. ಈ ಭಾಗದಲ್ಲಿ ಸುಮಾರು 50—60 ವರ್ಷಗಳ ಹಿಂದೆ ವಿದ್ಯುಚ್ಛಕ್ತಿ ಬಂದುದರಿಂದ ಆಗಿನಿಂದ ಇಂದಿನವರೆಗೂ ಎಲ್ಲ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್ಸ್ ಹಾಕುಕೊಂಡು ಬಂದಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಅಂದರೆ ನೂರಕ್ಕೆ 90 ರಷ್ಟು ಪ್ರಮಾಣದಲ್ಲಿ ಬೊಂಬಾಯಿ ಮತ್ತು ಹೈದರಾಬಾದ್ ಕರ್ಣಾಟಕದಲ್ಲಿ ಟ್ರಾನ್ಸ್‌ಮಿಷನ್ ಲೈನ್ ಹಾಕುವಂಥದ್ದು ಇದೆ. ಹಳೆ ಮೈಸೂರು ಭಾಗದಲ್ಲಿ ಖರ್ಚುಮಾಡುವಷ್ಟನ್ನೇ ಆ ಪ್ರದೇಶದಲ್ಲಿಯೂ ಖರ್ಚು ಮಾಡಬೇಕು ಎಂದು ಹೇಳುವುದಾದರೆ [illegible]0 ಮೈಲಿ ಟ್ರಾನ್ಸ್‌ಮಿಷನ್ ಲೈನ್ ಸಹ ಹಾಕುವುದಕ್ಕಾಗುವುದಿಲ್ಲ. ಟ್ರಾನ್ಸ್‌ಮಿಷನ್ ಲೈನ್ ಹಾಕದೆ ಇದ್ದರೆ ನಾವು ಶರಾವತಿಯಿಂದ ಬರುವ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಹೊಸ ಮೈಸೂರು, ಹಳೆ

ಮೈಸೂರು ಎನ್ನುವ ಧಾಟಿಯಲ್ಲಿ ಮಾತನಾಡುವುದು ಒಂದು ಫ್ಯಾಷನ್ ಆಗಿ ಜನರು ಮಾಡಿಕೊಂಡಿದ್ದಾರೆ. ದೇವರು ಅವರಿಗೆ ಸದ್ಬುದ್ಧಿ ಕೊಡಲಿ ಎಂದು ಹೇಳುತ್ತೇನೆ. ಅದಕ್ಕಿಂತ ಹೆಚ್ಚು ಹೇಳುವ ಶಕ್ತಿ ನನಗಿಲ್ಲ. ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗ ಮಾಡಿಕೊಳ್ಳಬೇಕು. ನಾವು ಉಪಯೋಗ ಮಾಡಿಕೊಳ್ಳಲಾರದೆ ಹೋದರೆ ಎರಡನೆ ರಾಜ್ಯಗಳಿಗೆ ತೆಗೆದುಕೊಂಡು ಹೋಗಿ ರೀಜನಲ್ ಗ್ರಿಡ್‌ನಿಂದ ಹಂಚಿಕೆ ಮಾಡಲು ಕೊಡಬೇಕು. ಆದುದರಿಂದ ನಮ್ಮಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಉಪಯೋಗಿಸಲು ಎಲ್ಲೆಲ್ಲಿ ಟ್ರಾನ್ಸ್‌ಮಿಷನ್ ಲೈನ್ ಹಾಕಬೇಕೋ ಅಲ್ಲೆಲ್ಲ ಹಾಕಬೇಕು. ಇದಕ್ಕೆ ದುಡ್ಡು ಖರ್ಚು ಮಾಡಬೇಕಾಗುತ್ತದೆ. ಅದನ್ನು ಮಾಡಲಾರದೆ ಈ ಪ್ರದೇಶಕ್ಕೆ ಹತ್ತು ಲಕ್ಷ ರೂಪಾಯಿ ಕೊಟ್ಟರೆ ಆ ಪ್ರದೇಶಕ್ಕೂ ಹತ್ತು ಲಕ್ಷ ರೂಪಾಯಿ ಖರ್ಚು ಮಾಡಬೇಕು ಎನ್ನುವ ಧಾಟಿಯಲ್ಲಿ ಮಾತನಾಡುತ್ತ ಹೋದರೆ ಶರಾವತಿಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ತನ್ನು ಎರಡನೆಯವರಿಗೆ ಮಾರಾಟ ಮಾಡಬೇಕಾಗುತ್ತದೆ. ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶರಾವತಿಯಿಂದ ವಿದ್ಯುಚ್ಛಕ್ತಿ ಬಂದ ಮೇಲೆ—ಒಂದು ಯೂನಿಟ್ ಈಗಾಗಲೇ ಬಂದಿದೆ, ಇನ್ನೊಂದು ಯೂನಿಟ್ ಈ ತಿಂಗಳ ಕೊನೆಯ ವೇಳೆಗೆ ಬರುತ್ತದೆ. ಟೆಸ್ಟ್ ಕೂಡ ಮುಗಿದಿದೆ. ಅದರ ಉದ್ಘಾಟನೆ ಆಗುತ್ತದೆ. ಈ ರೀತಿ ಸುಮಾರು ನಾಲ್ಕಾರು ತಿಂಗಳಲ್ಲಿ ಇನ್ನೂ ಒಂದು ಯೂನಿಟ್ ನಮಗೆ ಬರುವುದಕ್ಕೆ ಪ್ರಾರಂಭವಾಗುತ್ತದೆ. ಅನೇಕ ಜನರಿಗೆ ನಮಗೆ ಶರಾವತಿಯಿಂದ ಬರುವ ಇಷ್ಟೆಲ್ಲ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗ ಮಾಡಿಕೊಳ್ಳುವುದಕೆ ಸಾಧ್ಯವಿದೆಯೋ ಇಲ್ಲವೋ ಎನ್ನುವಂಥ ಸಂಶಯ ಬಂದಿದೆ. ಅದಕ್ಕೆ ನಾವು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಮಗೆ ದೊರಕುವ ವಿದ್ಯುತ್ತನ್ನು ಹಾಗೆಯೇ ನಷ್ಟ ಮಾಡದೆ ಅದನ್ನು ಉಪಯೋಗ ಮಾಡಿಕೊಳ್ಳಲು ಈಗಾಗಲೇ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಲೋಡ್ ಸರ್ವೆ ಕಾರ್ಯ ಕೂಡ ಮುಗಿದಿದೆ. ಬಹುಶಃ ವಿದ್ಯುತ್ತನ್ನು ನಷ್ಟ ಮಾಡಲಾರದೆ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಲ್ಲಿ ನಮಗೆ ಒಂದು ದೊಡ್ಡ ಕೊರತೆ ಎಂದರೆ ಸಾಮಾನಿನ ಮತ್ತು ಹಣದ ಕೊರತೆ. ಹಣದ ಕೊರತೆಯನ್ನು ನೀಗಿಸಿದರೆ ಮೆಟೀರಿಯಲ್ಸ್ ಕೊರತೆ ಪರಿಹಾರವಾಗುತ್ತದೆ ಎಂದು ನನಗನ್ನಿಸುತ್ತದೆ. ಹಣದ ಕೊರತೆ ಬಹಳ ಇದೆ. ಒಂದು ಕಿಲೋವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಲು ಒಂದು ಸಾವಿರ ರೂಪಾಯಿ ಖರ್ಚಾಗುತ್ತದೆ ಮತ್ತು ಅದನ್ನು ಹಂಚಿಕೆ ಮಾಡಲು ಎರಡು ಸಾವಿರ ರೂಪಾಯಿ ಆಗುತ್ತದೆ ಎಂದು ನಮ್ಮ ಇಂಜಿನಿಯರುಗಳು ಹೇಳುತ್ತಾರೆ. ಏಕೆಂದರೆ ಟ್ರಾನ್ಸ್‌ಮಿಷನ್ ಲೈನ್ಸನ್ನು ನಾವು ತೆಗೆದುಕೊಳ್ಳಬೇಕು. ಎಲ್ಲಾ ಕಡೆಯೂ ಟ್ರಾನ್ಸ್‌ಮಿಷನ್ ಲೈನ್ಸ್‌ಗೆ ಸ್ವಿಚ್‌ಗಳನ್ನು ಬೇರೆ ಹಾಕಬೇಕಾಗುತ್ತದೆ. ಇನ್‌ಸ್ಯುಲೇಟರ್ಸ್ ಬೇರೆ ಬೇಕಾಗುತ್ತದೆ. ಅದೇ ರೀತಿಯಲ್ಲಿ ಬೇಕಾದಷ್ಟು ವೈರ್ಸ್, ಕಂಡಕ್ಟರ್ಸ್, ಟ್ರಾನ್ಸ್‌ಫಾರ್ಮರ್ಸ್ ಎಲ್ಲಾ ಬೇಕಾಗುತ್ತದೆ. ಇವತ್ತಿನ ದಿವಸ ಆ ಸಾಮಾನುಗಳನ್ನು ಒಂದು ಕಡೆ ಸೇರಿಸಿ ಸ್ಟಾಕ್ ಮಾಡದೇ ಹೋದರೆ ಬಹುಶಃ ಯಾವ ಪ್ರಮಾಣದಲ್ಲಿ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೋ ಅದರಲ್ಲಿ ಸ್ವಲ್ಪಮಟ್ಟಿಗೆ ತೊಡಕು ಆಗುತ್ತದೆ. ಒಂದು ಕಿಲೊವ್ಯಾಟ್ ಯುಟಿಲೈಜ್ ಮಾಡಬೇಕಾದ ಸುಮಾರು 2 ಸಾವಿರ ರೂಪಾಯಿಗಳು ಬೇಕು. ಈಗ ನಮಗೆ ಒಂದು ಮಿಲಿಯನ್ ಕಿಲೊವಾಟ್ ಪವರ್ ಬರುತ್ತದೆ. ಅಂದಮೇಲೆ ಒಂದು ಕಿಲೊವಾಟ್‌ಗೆ 2 ಸಾವಿರ ರೂಪಾಯಿಗಳಂತೆ ಲೆಕ್ಕ ಹಾಕಿದರೆ ಎಷ್ಟು ದುಡ್ಡು ಬೇಕಾಗುತ್ತದೆಂಬುದನ್ನು ಮಾನ್ಯ ಸದಸ್ಯರೇ ಲೆಕ್ಕ ಹಾಕಿ ಕೊಳ್ಳಬಹುದು. ಇವತ್ತು ದುಡ್ಡಿನ ಅಭಾವ ಇದೆ. ಅದನ್ನು ಒದಗಿಸಲು ಸತತವಾಗಿ ಪ್ರಯತ್ನಮಾಡುತ್ತಿದ್ದೇವೆ. ಇನ್ನು ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಸಲುವಾಗಿ ವಿದ್ಯುಚ್ಛಕ್ತಿಯನ್ನು ಹೇರಳವಾಗಿ ಕೊಡುತ್ತಿದ್ದೇವೆಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಹಂಚಲು ಶರಾವತಿಯ ಪವರ್ ಎಲ್ಲವನ್ನೂ ಉಪಯೋಗಮಾಡುತ್ತೇವೆಂದು ಹೇಳಿದರೆ ಅದು ಆಗುವುದಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್ ಮತ್ತು ಪಂಪ್‌ಸೆಟ್‌ಗೋಸ್ಕರ ಕೇವಲ ಶೇಕಡ 5 ರಷ್ಟನ್ನೂ ಸಹ ನಾವು ಉಪಯೋಗಮಾಡುವುದಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಪವರ್ ಹೆಚ್ಚು ಕನ್‌ಸ್ಯೂಮ್ ಆಗುವುದಿಲ್ಲ. ದೊಡ್ಡದೊಡ್ಡ ಕೈಗಾರಿಕೆಗಳು ಅದರಲ್ಲೂ ಮೆಟಲರ್ಜಿಕಲ್ ಇಂಡಸ್ಟ್ರೀಸ್, ಫರ್ಟಿಲೈಜರ್ಸ್ ಫ್ಯಾಕ್ಟರಿ, ಮತ್ತು ಅಲ್ಯೂಮಿನಿಯಂ ಫ್ಯಾಕ್ಟರಿಗಳೆಲ್ಲಾ ಇಲ್ಲಿ ಬರುತ್ತಿವೆ. ಅವಕ್ಕೆಲ್ಲಾ ಹೆಚ್ಚಿಗೆ ವಿದ್ಯುಚ್ಛಕ್ತಿ ಬೇಕು. ಬಹಳ ದೊಡ್ಡ ಕೈಗಾರಿಕೆಗಳು ಮಾತ್ರ ಬಾರೀ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಕನ್‌ಸ್ಯೂಮ್ ಮಾಡುತ್ತವೆ. ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ಮೂರೂವರೆ ಲಕ್ಷ ಕಿಲೊವಾಟ್ ವಿದ್ಯುಚ್ಛಕ್ತಿಯನ್ನು ಕನ್‌ಸ್ಯೂಮ್ ಮಾಡುತ್ತಾರೆ. ಒಟ್ಟಿನಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಹೆಚ್ಚು ವಿದ್ಯುಚ್ಛಕ್ತಿ ಖರ್ಚಾಗುವುದಿಲ್ಲ. ಒಂದು ಪಂಪ್ ಹಗಲು ರಾತ್ರಿ ಉಪಯೋಗಿಸಿ

(ಶ್ರೀ ವೀರೇಂದ್ರ ಪಾಟೀಲ್)

ದರೂ ತಿಂಗಳಿಗೆ 20–25 ರೂಪಾಯಿಗಳ ಖರ್ಚು ಕೊಡಬಹುದು. ಕೈಗಾರಿಕೆಗಳೇನೋ ಭಾರೀ ಪ್ರಮಾಣದಲ್ಲಿ ಆಗುತ್ತಿವೆ. ಕೈಗಾರಿಕೆಗಳು ಹೆಚ್ಚು ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ಬರಬೇಕು ಎಂಬುದಾಗಿ ಹೇಳುವಾಗ ಅದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಲೇ ಬೇಕು. ಕೈಗಾರಿಕೆಗಳು ಪಬ್ಲಿಕ್ ಸೆಕ್ಟರ್‌ನಲ್ಲಿ ಮತ್ತು ಪ್ರೈವೇಟ್ ಸೆಕ್ಟರಿನಲ್ಲಿ ಹೆಚ್ಚಲು ಪ್ರಯತ್ನ ಮಾಡುತ್ತಿದ್ದಾರೆ. ಕೆಲವು ಸದಸ್ಯರು ಇಂಡಸ್ಟ್ರಿಯಲಿಸ್ಟ್‌ಗಳಿಗೆ ಮತ್ತು ಎಂಟರ್‌ಪ್ರೈಜರ್ಸ್‌ಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದರ ಸಲುವಾಗಿ ಈಗ ಹೈಪವರ್ ಕಮಿಟಿ ಎಂಬುದಾಗಿ ರಚನೆ ಮಾಡಿದ್ದೇವೆ. ಚೀಫ್ ಸೆಕ್ರೆಟರಿ ಆ ಕಮಿಟಿಗೆ ಚೇರ್‌ಮನ್ ಆಗಿದ್ದಾರೆ. ಎಲ್ಲಾ ಕೈಗಾರಿಕೆಗಳನ್ನು ಸ್ಕ್ರೂಟಿನೈಜ್ ಮಾಡುವುದಕ್ಕೋಸ್ಕರ ಒಂದು ಕಮಿಟಿ ಮಾಡಿದ್ದೇವೆ. ನೀರು ಬೇಕಾದರೆ ಪಿ. ಡಬ್ಲ್ಯು. ಡಿ. ಸೆಕ್ರೆಟರಿ, ಭೂಮಿಗೆ ರೆವಿನ್ಯೂ ಸೆಕ್ರೆಟರಿ, ವಿದ್ಯುಚ್ಛಕ್ತಿಗೆ ಎಲೆಕ್ಟ್ರಿಸಿಟಿ ಬೋರ್ಡ್ ಚೀಫ್ ಇಂಜಿನಿಯರ್ ಇರುತ್ತಾರೆ. ದುಡ್ಡು ಬೇಕಾದರೆ ಫೈನಾನ್‌ಷಿಯಲ್ ಸೆಕ್ರೆಟರಿ ಇರುತ್ತಾರೆ. ಆ ರೀತಿಯಾಗಿ ಸಂಬಂಧಪಟ್ಟ ಸೆಕ್ರೆಟರಿಗಳು ಮುಖ್ಯ ಕಾರ್ಯದರ್ಶಿಯವರನ್ನು ಸೇರಿಸಿಕೊಂಡು ಒಂದು ಹೈ ಪವರ್ ಕಮಿಟಿಯನ್ನು ಮಾಡಿದ್ದೇವೆ. ಇವತ್ತು ಹೆಚ್ಚು ಪ್ರಮಾಣದಲ್ಲಿ ಕೈಗಾರಿಕೆಗಳು ಬರಲಿ. ಆಗ ಅವಕ್ಕೆ ಪ್ರೋತ್ಸಾಹ ಜಾಸ್ತಿಯಾಗುತ್ತದೆ. ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದರಿಂದ ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದಾರೆ. ಕೈಗಾರಿಕೆಗಳು ಬರೀ ಬೆಂಗಳೂರು ಸುತ್ತಲೇ ಬೇಡ ಏಕೆಂದರೆ ಈಗಾಗಲೇ ಕಂಜೆಷನ್ ಆಗಿದೆ. ಬೆಂಗಳೂರಿನ ಹೊರಗಡೆ ಮಂಗಳೂರು, ಶಿವಮೊಗ್ಗ, ಭದ್ರಾವತಿ ಮಧ್ಯೆ, ಧಾರವಾಡ, ಹುಬ್ಬಳ್ಳಿ ಮಧ್ಯೆ, ಬೆಳಗಾಂ, ಅದರಲ್ಲೂ ಹೈದರಾಬಾದ್ ಕರ್ಣಾಟಕ, ಗುಲ್ಬರ್ಗಾ, ಬಳ್ಳಾರಿ ಮುಂತಾದ 8 ಸ್ಥಳಗಳಲ್ಲಿ ಇಂಡಸ್ಟ್ರೀಸ್ ಏರಿಯಾಗಳನ್ನು ಸೆಲೆಕ್ಟ್ ಮಾಡಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಕೊಡಬೇಕೆಂದು ಈಗಾಗಲೇ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದೆ. ಹೆಚ್ಚು ಪ್ರಮಾಣದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮತ್ತು ದೊಡ್ಡ ದೊಡ್ಡ ಇಂಡಸ್ಟ್ರೀಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ಮೇಲ್ಮನೆಯಲ್ಲಿ ಒಂದು ವಿಚಾರವಾಗಿ ಹೇಳಿದ್ದೇನೆ. ಅದನ್ನು ತಿಳಿದುಕೊಂಡು ಮಾನ್ಯ ಸದಸ್ಯರಿಗೆ ಒಂದು ಶಂಕೆ ಬಂದಿದೆ. ಆದ್ದರಿಂದಲೇ ಒಂದು ಟ್ಯಾರಿಫ್ ಕಮಿಟಿ ಮಾಡುವ ಅವಶ್ಯಕತೆ ಇದೆ. ಹಿಂದೆ ಜೋಗ್, ಭದ್ರಾವತಿ, ಷಿಂಷಾ, ತುಂಗಭದ್ರಾ ಪವರ್ ಇತ್ತು. ಇವತ್ತು ಅದಕ್ಕೂ ಐದಾರು ಪಟ್ಟು ಜಾಸ್ತಿ ಪವರ್ ಬರುತ್ತಾ ಇದೆ. ಇದು ಸಾಕಷ್ಟು ರೀತಿ ಉಪಯೋಗವಾಗಬೇಕಾಗಿದ್ದರೆ ನಮ್ಮ ಟ್ಯಾರಿಫ್ ರಿವೈಜ್ ಮಾಡಬೇಕು. ಈಗಾಗಲೇ ಬೋರ್ಡಿನವರು ಆ ರೀತಿ ಮಾಡಿ ಎಂಬುದಾಗಿ ಹೇಳಿದ್ದಾರೆ. ಅವರು ಅದನ್ನು ವಿಚಾರಮಾಡಿದ್ದಾರೆ ಟ್ಯಾರಿಫ್ ಕಮಿಟಿ ಮಾಡುವಾಗ ಅವರಿಗೆ ನಾವು ಡೈರಕ್ಷನ್ ಕೊಡುವುದು ಸರಿಯಲ್ಲ. ಅಪ್‌ವರ್ಡ್‌ಮಾಡಬೇಡಿ, ಡೌನ್‌ವರ್ಡ್‌ಮಾಡಿ ಎಂದು ಹೇಳುವುದು ನಮ್ಮ ನೀತಿಯಲ್ಲ. ನಮ್ಮಲ್ಲಿರುವ ವಿದ್ಯುಚ್ಛಕ್ತಿ ಉಪಯೋಗವಾಗುವುದಕ್ಕೆ ಯಾವ ರೀತಿ ಇನ್‌ಸೆಂಟಿವ್ ಕೊಡಬೇಕು. ಇವತ್ತು ಎಲೆಕ್ಟ್ರಿಸಿಟಿ ಬೋರ್ಡ್‌ಗೆ ನಷ್ಟ ಆಗಬಾರದು, ಅದು ನಷ್ಟವಾಗದಂತೆ ನಡೆಯಬೇಕು. ಟ್ಯಾರಿಫ್ ಕಮಿಟಿಯವರು ಶಿಫಾರಸುಗಳನ್ನು ಬೋರ್ಡಿಗೆ ಕಳುಹಿಸುತ್ತಾರೆ, ಬೋರ್ಡಿನವರು ಸರ್ಕಾರಕ್ಕೆ ಕಳುಹಿಸುತ್ತಾರೆ. ಅದರಮೇಲೆ ಸರ್ಕಾರದವರು ವಿಚಾರಮಾಡುತ್ತಾರೆ. ಅದರಲ್ಲಿ ದರ ಇಳಿಸಿ, ಏರಿಸಬೇಡಿ ಎಂಬುದಾಗಿ ನಾವು ಹೇಳುವುದಕ್ಕಾಗುವುದಿಲ್ಲ. ಇವತ್ತು ಇಳಿಸಿ ಎಂಬುದಾಗಿ ಘೋಷಣೆ ಮಾಡುವುದು, ಆ ರೀತಿ ಡಿಮ್ಯಾಂಡ್ ಮಾಡುವುದು ಸರಿಯಲ್ಲ. ನಾನು ಇಲ್ಲಿ ಆ ವಿಷಯದಲ್ಲಿ ಏನೂ ಹೇಳುವ ಪರಿಸ್ಥಿತಿಯಲ್ಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ದರ ಇಳಿಸಬೇಕು, ದರ ಏರಿಸಬೇಕೆಂಬ ಬಗ್ಗೆ ಈಗಾಗಲೇ ಅನೇಕ ಸಂಸ್ಥಾನಗಳಲ್ಲಿನ ಅಂಕಿ ಅಂಶಗಳನ್ನು ಶೇಖರಣೆ ಮಾಡುತ್ತಿದ್ದಾರೆ. ಮೈಸೂರಿಗೆ ಸುದೈವದಿಂದ ಹೇರಳವಾಗಿ ಜಲವಿದ್ಯುಚ್ಛಕ್ತಿ ಒದಗುತ್ತಿದೆ. ಈಗ ಸಾಕಷ್ಟು ಆಗಲಿಲ್ಲವಾದರೂ ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪಾದನೆಮಾಡಬಹುದು. ಹಿಂದೂಸ್ಥಾನದ ಯಾವ ಸಂಸ್ಥಾನದಲ್ಲಿಯೂ ಇಷ್ಟು ಕಡಮೆ ದರದ ಟ್ಯಾರಿಫ್ ಇಲ್ಲ. ಒಂದೆರಡು ಊರುಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚು ಇರಬಹುದು. ಆ ಮಾತು ಬೇರೆ. ನಮ್ಮ ಟ್ಯಾರಿಫ್ ಏನಿದೆ it is the lowest today in the Country. ಕೇಂದ್ರ ಸರ್ಕಾರದವರು ಅದನ್ನು ಒತ್ತಾಯಪಡಿಸುತ್ತಿದ್ದಾರೆ. ಕೆಲವು ಸಂಸ್ಥಾನಗಳವರಿಗೆ ನ್ಯಾಚುರಲ್ ಅಡ್ವಾಂಟೇಜ್ ಇರುತ್ತದೆ. ನಮ್ಮಲ್ಲಿ ಬರತಕ್ಕ ಪವರನ್ನೆಲ್ಲಾ ವಿಶೇಷವಾಗಿ ಇಂಡಸ್ಟ್ರೀಸಿಗೆ ಹಾಕುತ್ತೇವೆ. ಆದರೂ ನಮ್ಮ ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಆಗುತ್ತಾ ಇಲ್ಲವೆಂದು ಕೇಂದ್ರದಲ್ಲಿ ಒತ್ತಾಯಪಡಿಸುತ್ತಿದ್ದೇವೆ. ಕೇಂದ್ರದಲ್ಲಿ ಈ ಟ್ಯಾರಿಫ್ ಬಗ್ಗೆ ವಿಚಾರಮಾಡುವುದಕ್ಕಾಗಿ ಪವರ್ ಮಿನಿಸ್ಟರ್

ಕರ್ನಾಟಕ ವಿಧಾನಮಂಡಲ

ಆಗಿರುವ ಶ್ರೀ ವೆಂಕಟರಾಮನ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆಮಾಡಿದ್ದಾರೆ. ಅದಕ್ಕೆ ನಾನೂ ಒಬ್ಬ ಸದಸ್ಯ. ಎರಡನೆ ಕಡೆಯೂ ಈ ವಿಚಾರ ನಡೆಯುತ್ತಾ ಇದೆ. ಮೈಸೂರಿಗಿಂತ ಮದ್ರಾಸಿನಲ್ಲಿ ಟ್ಯಾರಿಫ್ ಕಡಿಮೆ ಇದೆಯೋ ಇಲ್ಲವೋ ಗೊತ್ತಿಲ್ಲ. ನಾವು ಇಲ್ಲಿ ಕೈಗಾರಿಕೆಗಳಿಗೋಸ್ಕರ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿದ್ದೇವೆಂದು ನಾನು ಹೇಳುತ್ತೇನೆ. ಇವತ್ತು ನ್ಯಾಚುರಲ್ ರಿಸೋರ್ಸಸ್ ಎಂದರೆ, ಮಿನರಲ್ ಫೆಲ್ತ್, ಕೋಲ್—ಇವೆಲ್ಲಾ ಅಲ್ಲಿ ಇರುತ್ತದೆ. ಅಲ್ಲಿ ಈ ರೀತಿ ಎಂಡನೆ ರಿಸೋರ್ಸಸ್ ಇರುವ ಹಾಗೆ ಇಲ್ಲಿ ನಮಗೆ ರಿಸೋರ್ಸಸ್, ಪವರ್ ಪೊಟೆನ್‌ಷಿಯಲ್. ಆ ರೀತಿ ಹೇಳಿದರೆ ನ್ಯಾಯಬದ್ಧವಾದುದು, ಅದರಲ್ಲಿ ಏನೂ ತಪ್ಪಿಲ್ಲ. ಒಂದು ವೇಳೆ ಇಷ್ಟು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚಿಸಿಕೊಂಡು ಜಾಸ್ತಿ ಲಾಭ ಪಡೆಯುತ್ತಿದ್ದರೆ ಅದೇನೂ ಕೆಟ್ಟದ್ದು ಇಲ್ಲ. ಆಂಧ್ರದಲ್ಲಿ ಹೇರಳವಾಗಿ ಕೋಲ್ ಇದೆ. ಅಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಯಾಗಬೇಕಾಗಿದ್ದರೆ ದೇವರು ಅಲ್ಲಿ ಏನು ಕೊಟ್ಟಿದ್ದಾನೆಂದರೆ ಕೋಲ್ ಸಂಪತ್ತು ಕೊಟ್ಟಿದ್ದಾನೆ. ಅದನ್ನು ಪ್ರಕೃತಿಯಾಗಿ ಯಾರೂ ಹೊಂದುವುದಿಲ್ಲ. ಕೋಲ್‌ನಲ್ಲಿ ಪವರ್ ಪೊಟೆನ್ಷಿಯಾಲಿಟಿ ಇರುವುದರಿಂದ ಸಂಸ್ಥಾನದ ಹುಟ್ಟುವಳಿಯನ್ನು ಮತ್ತೆ ಹೆಚ್ಚಿಸಬಹುದು. ಈಗ ಶರಾವತಿಯ ಮೇಲೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, ಕಾಳೀ ನದಿಗೆ 120 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕು. ಇಷ್ಟೊಂದು ಇನ್‌ವೆಸ್ಟ್ ಮಾಡಿದಮೇಲೆ ಏನಾದರೂ ಸಂಪಾದನೆ ಮಾಡದೇ ಹೋದರೆ ಈ 100—120 ಕೋಟಿ ರೂಪಾಯಿಗಳನ್ನು ಎಲ್ಲಿಂದ ತರಬೇಕು ? ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಿ ಅದರಿಂದ ಲಾಭ ಪಡೆಯುವುದು ಸ್ವಾಭಾವಿಕವಾದ ಮಾತು. ಈಗ ನಾವು ವಿದ್ಯುಚ್ಛಕ್ತಿ ದರ ಹೆಚ್ಚಿಸುತ್ತೇವೆ, ಅಥವಾ ಅದನ್ನು ಅಷ್ಟಕ್ಕೇ ಇಡುತ್ತೇವೆಂದು ಹೇಳುವ ತತ್ತ್ವ ಬಹುಶಃ ಸಮಂಜಸವಾದುದಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಬೇರೆ ಸ್ಟೇಟಿಗೆ ಜಾಸ್ತಿ ಮಾಡಲಿ, ನಮ್ಮ ಸ್ಟೇಟಿಗೆ ಕಡಿಮೆ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಸಂಸ್ಥಾನದಲ್ಲಿ ಈಗ ಅಲ್ಯೂಮಿನಿಯಂ ಫ್ಯಾಕ್ಟರಿ ಒಂದು ನಿರ್ಮಾಣ ಮಾಡಬೇಕೆಂದರೆ 3—3½ ಲಕ್ಷ ಕಿಲೊವಾಟ್ಸ್ ಪವರ್ ಬೇಕು. ಅದನ್ನು ನೋ ಪ್ರಾಫಿಟ್, ನೋ ಲಾಸ್ ಬೇಸಿಸ್ ಮೇಲೆ ಮಾಡುವುದರಿಂದ ಯಾವ ಎಲೆಕ್ಟ್ರಿಸಿಟಿ ಯೋಜನೆಯಿಂದಲೂ ಏನೊಂದು ಕಾಸೂ ಕೂಡ ಕೂಡುವುದಿಲ್ಲ. ಅದನ್ನು ಯಾವ ರೀತಿ ಇನ್‌ವೆಸ್ಟ್ ಮಾಡಬೇಕು ಅನ್ನುವುದನ್ನು ವಿಚಾರ ಮಾಡಬೇಕು. ಕೇಂದ್ರದಿಂದ, ವರ್ಲ್ಡ್ ಬ್ಯಾಂಕಿನಿಂದ, ಪಿ. ಎಲ್. ಸಾಲ ತೆಗೆದುಕೊಂಡು ಖರ್ಚು ಮಾಡುತ್ತಿದ್ದೇವೆ ; ಅದನ್ನು ತಿರುಗಿ ಕೊಡಬೇಕಾಗುತ್ತದೆ ; ತಿರುಗಿ ಕೊಡಬೇಕಾದರೆ, ಅದರಿಂದ ಏನಾದರೂ ಲಾಭ ಬರಬೇಕು. ರೈತರು ಕೊಡದಿದ್ದರೆ ಆ ಸಾಲವನ್ನು ಹೇಗೆ ತೀರಿಸುವುದು ? ಯಾವನು ಉಪಯೋಗ ಮಾಡುತ್ತಾನೆಯೋ ಅವನು ಕೊಡಬೇಕಾಗುತ್ತದೆ. ರೀಯಸ್ಟ್ ಟಾರೀಫ್ ಇರಬೇಕು, ಅಷ್ಟೆ. ಅದರ ಮೇಲೆ ವ್ಯಾಪಾರ ಮಾಡಬಾರದು, ಲಾಭ ತೆಗೆದುಕೊಳ್ಳಬಾರದು ಎಂದು ಹೇಳುವಂಥಾದ್ದು ಅಷ್ಟು ಸಮಂಜಸವಾದುದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

5.30 P.M.

ಇನ್ನು ಕೆಲವು ಮಾನ್ಯ ಸದಸ್ಯರು ಜನರೇಷನ್ ಕೆಲಸವನ್ನು ಬೋರ್ಡಿಗೆ ಏಕೆ ಕೊಡಬಾರದು ಎಂದು ಕೇಳಿದರು. ಅದನ್ನು ಒಪ್ಪುವ ಹಾಗಿಲ್ಲ. ಕೆಲವು ಕಡೆ ಹಾಗೆ ಮಾಡಿದ್ದಾರೆ; ಎಲ್ಲೋ ಒಂದೆರಡು ಕಡೆಗಳಲ್ಲಿ ಮಾಡಿದ್ದಾರೆ. ಮದ್ರಾಸಿನಲ್ಲಿ ಬೋರ್ಡಿಗೇ ಸ್ಕೀಮುಗಳನ್ನೂ ಕೊಟ್ಟಿದ್ದಾರೆ, ದುಡ್ಡೂ ಅವರಿಗೇ ಕೊಟ್ಟಿದ್ದಾರೆ; ಯೋಜನೆಗಳನ್ನು ಕಾರ್ಯಗತಮಾಡುವ ಜವಾಬ್ದಾರಿಯನ್ನೂ ಅವರಿಗೇ ಕೊಟ್ಟಿದ್ದಾರೆ. ನಾವು ಹಾಗೆ ಮಾಡುವುದಕ್ಕಾಗುವುದಿಲ್ಲ. ನಮ್ಮ ನೀತಿ ಹಾಗೆ ಇಲ್ಲ. ಇಲ್ಲಿ ಎಲ್ಲಾ ಜನರೇಷನ್ ನಮ್ಮ ಜವಾಬ್ದಾರಿ. ತುಂಗಭದ್ರವಾಗಲಿ, ಭದ್ರವಾಗಲಿ, ಅಥವ ಶರಾವತಿಯಾಗಲಿ, ಜೋಗ್ ಆಗಲಿ, ನಾವು ಸರಕಾರದವರು ದುಡ್ಡು ತಂದು, ಯೋಜನೆಗಳನ್ನು ಕಾರ್ಯಗತಮಾಡಿ, ಬಲ್ಕ್—ಪವರ್ ಬೋರ್ಡಿಗೆ ಮಾರುತ್ತೇವೆ. ಬೋರ್ಡಿನವರು ಅದನ್ನು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ; ಬೋರ್ಡನ್ನು ಒಂದು ಏಜೆನ್ಸಿಯಾಗಿ ಮಾಡಿಕೊಂಡಿದ್ದೇವೆ. ಬೋರ್ಡಿಗೆ ಬೇಕಾದ ಪವರ್ ಕೊಟ್ಟು, ಅವರು ಕನ್‌ಸ್ಯೂಮರುಗಳಿಗೆ ಡಿಸ್ಟ್ರಿಬ್ಯೂಷನ್ ಮಾಡುವ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಆ ರೀತಿ ಮಾಡುವಾಗ, ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಯೋಜನೆ ಕಾರ್ಯಗತ ಮಾಡುತ್ತೇವೆ. ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಪರಿಸ್ಥಿತಿ ಇರುವುದರಿಂದ, ಯೋಜನೆಗಳನ್ನು ಬೋರ್ಡಿಗೆ ವಹಿಸತಕ್ಕಂಥಾದ್ದು ಸಾಧ್ಯವಿಲ್ಲ. ಅದಕ್ಕಾಗಿ, ನಾವೇ ಯೋಜನೆಗಳನ್ನು ವಹಿಸಿಕೊಂಡು, ಕಾರ್ಯಗತಮಾಡಿ, ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ, ಬಲ್ಕ್ ಪವರನ್ನು ಕೊಡುವ ನೀತಿ ಅನುಸರಿಸುತ್ತಿದ್ದೇವೆ.

(ಶ್ರೀ ವೀರೇಂದ್ರ ಪಾಟೀಲ್)

ನಾವೊಬ್ಬರೇ ಈ ರೀತಿ ಮಾಡುತ್ತಿಲ್ಲ. ಅನೇಕ ಸ್ಟೇಟುಗಳು ನಮ್ಮ ರಾಷ್ಟ್ರದಲ್ಲಿ ಈ ನೀತಿಯನ್ನು ಬಹುಶಃ ಅನುಸರಿಸುತ್ತಿವೆ. ಅದು ತಪ್ಪು ಅಲ್ಲವೆಂದು ನನಗನಿಸುತ್ತದೆ. ಮತ್ತು ಅದು ದೇಶದ ಹಿತದಿಂದಲಾಗಲಿ, ರೈತರ ಹಿತದಿಂದಾಗಲಿ, ಎಲ್ಲರ ಹಿತದಿಂದಲೂ ಒಳ್ಳೆಯದು ಎಂದು ತಿಳಿದುಕೊಂಡು ಈ ನೀತಿಯನ್ನು ನಾವು ಅನುಸರಿಸುತ್ತಾ ಇದ್ದೇವೆ.

ನಾನು ಈಗಾಗಲೆ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ: ನಾವು ಎಲೆಕ್ಟ್ರಿಸಿಟಿ ಬೋರ್ಡಿಗೆ ಸಾಕಷ್ಟು ಹಣಸಹಾಯ ಕೊಡುವ ಜವಾಬ್ದಾರಿ ನಮಗಿದೆ ಎಂದು. ದುಡ್ಡು ಸಾಕಷ್ಟು ಪ್ರಮಾಣದಲ್ಲಿ ಕೊಡಲಾರದೆ ಹೋದರೆ, ಅವರು ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ನಮಗೆ ಕೂಡ ಒಂದು ಮಿತಿ ಇದೆ. ಈಗಾಗಲೇ ಬೋರ್ಡಿಗೆ ಏನು ದುಡ್ಡು ಕೊಟ್ಟಿದ್ದೇವೆ ಅನ್ನುವುದನ್ನು ಒಂದು ಸಂಕ್ಷಿಪ್ತ ರೀತಿಯಲ್ಲಿ ಹೇಳುತ್ತೇನೆ: ಇಲ್ಲಿಯವರೆಗೆ ಕೊಟ್ಟಿರುವ ಲೋನ್—549 ಲಕ್ಷದ 25 ಸಾವಿರ ರೂಪಾಯಿ; 1964-65ರಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಸುಮಾರು 85 ಲಕ್ಷ ರೂಪಾಯಿ ಕೊಟ್ಟಿದ್ದೇವೆ; ಐ.ಪಿ. ಸೆಟ್ಟುಗಳಿಗೋಸ್ಕರ ಪವರ್ ಸಪ್ಲೈ ಮಾಡಲು 70 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಈ ರೀತಿಯಿಂದ ಬೋರ್ಡಿನವರಿಗೆ ರೂ. 704,25,000 ಲೋನ್ ಅಡ್ವಾನ್ಸ್ ಮಾಡಿದ್ದೇವೆ. ಇಷ್ಟು ಅಡ್ವಾನ್ಸ್ ಮಾಡಿದ್ದಲ್ಲದೆ, ಈ ವರ್ಷ ಸುಮಾರು 250 ಲಕ್ಷ ರೂಪಾಯಿಗಳನ್ನು ಕೊಡಬೇಕು ಅಂತ ಬಜೆಟ್ಟಿನಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಬೋರ್ಡು ಪಬ್ಲಿಕ್ ಲೋನ್ ಫ್ಲೋಟ್ ಮಾಡುತ್ತದೆ; ಆಗ ಸರಕಾರ ಗ್ಯಾರಂಟಿ ಕೊಡಬೇಕಾಗುತ್ತದೆ. ಇಲ್ಲಿಯವರೆಗೆ ಬೋರ್ಡಿನವರು 11 ಕೋಟಿ 23 ಲಕ್ಷ ಲೋನನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಗ್ಯಾರಂಟಿ ಕೊಟ್ಟಿದ್ದೇವೆ. ಮೊದಲು 10 ಕೋಟಿ ಎಂದು ಅದರ ಬಾರೋಯಿಂಗ್ ಕೆಪ್ಯಾಸಿಟಿ ಇತ್ತು, ಅದನ್ನು 20 ಕೋಟಿಗೆ ಹೆಚ್ಚಿಸಬೇಕಾಯಿತು; ಅದರ ಅಭಿವೃದ್ಧಿ ಯೋಜನೆಗಳಿಗೆ ಮಾನ್ಯತೆ ಕೊಟ್ಟು 20 ಕೋಟಿಗೆ ಹೆಚ್ಚಿಸಿತು. ಅಷ್ಟು ಮಾಡುವಾಗ, ಹೊಸದಾಗಿ ಏನು ಮಾಡಿದ್ದೇವೆಂದರೆ, ಈ ಒಂದು ಅನ್ನದ ಅಭಾವ ಪರಿಸ್ಥಿತಿ ಬಂದಿರುವುದರಿಂದ, ಇರ್ರಿಗೇಷನ್ ಡೆವಲಪ್‌ಮೆಂಟು ಸ್ಕೀಮುಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬೇಕೆಂದು ಮಾಡಿ, ಪಂಪು ಸೆಟ್ಟುಗಳನ್ನು ಹೆಚ್ಚಾಗಿ ಸರ್ವೀಸ್ ಮಾಡಿಸಬೇಕೆಂದಿದ್ದೇವೆ. ಅದಕ್ಕೆ ಬೇಕಾದಂಥ ಮೆಟೀರಿಯಲ್ಲುಗಳ ಸಲುವಾಗಿ 700 ಲಕ್ಷ ರೂಪಾಯಿನ ಒಂದು ಕಾರ್ಯಕ್ರಮವನ್ನು ಹಾಕಿ, ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ. ಆ ಸಹಾಯ ಇನ್ನೂ ಬಂದಿಲ್ಲ. ಆ ಸಹಾಯ ಬಹುಶಃ ಕೇಂದ್ರ ಕೊಡಬಹುದೆಂದು ಲೆಕ್ಕಹಾಕಿದ್ದೇವೆ. ಆ ಸಹಾಯ ಬಂದರೆ, ಅದಕ್ಕೆ ಗ್ಯಾರಂಟಿ ಕೊಡಬೇಕಾದ ಪರಿಸ್ಥಿತಿ ಇದೆ.

Sri S. SIVAPPA.—Does Government take the entire responsibility for putting all the transmission lines or does the Electricity Board take the responsibility for it?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಹೈಪವರ್ ಟ್ರಾನ್ಸ್‌ಮಿಷನ್ ಲೈನುಗಳಾದ 220, 110 ಟ್ರಾನ್ಸ್‌ಮಿಷನ್ ಲೈನುಗಳನ್ನು ಎಚ್.ಇ.ಸಿ.ಪಿ.ಯಿಂದ ಮಾಡಿಸುತ್ತಾ ಇದ್ದೇವೆ. ಬ್ರಾಂಚ್ ಲೈನುಗಳನ್ನು ಎಲೆಕ್ಟ್ರಿಸಿಟಿ ಬೋರ್ಡಿನವರ ಮೂಲಕ ಮಾಡಿಸುತ್ತಾ ಇದ್ದೇವೆ. ಈ ಲೈನುಗಳನ್ನು ಮಾಡಿಸುವ ಏಜೆನ್ಸಿ ಬೇರೆ ಇರಬಹುದು. ಅವರು ಲೈನ್ ಹಾಕಿದರೂ ಕೂಡ ಆ ಟ್ರಾನ್ಸ್‌ಮಿಷನ್ ಲೈನಿಗೆ ಖರ್ಚಾಗುವ ದುಡ್ಡನ್ನು ಸರಕಾರ ಒದಗಿಸಬೇಕಾದ ಪರಿಸ್ಥಿತಿ ಬಂದಿದೆ.

ಈಗ ನಾವು ಎಲೆಕ್ಟ್ರಿಸಿಟಿ ಬೋರ್ಡಿಗೆ ಇಷ್ಟು ಮಾತ್ರ ಸಹಾಯ ಕೊಟ್ಟಿದ್ದೇವೆ. ಇನ್ನು ರೂರಲ್ ಇಲೆಕ್ಟ್ರಿಫಿಕೇಷನ್ ವಿಚಾರ ಹೇಳಬೇಕಾಗಿದ್ದರೆ, ಅದರಿಂದ ಬೋರ್ಡಿಗೆ ಲಾಭ ಬರುವುದಿಲ್ಲ. ಅದು ಯಾವಾಗಲೂ ನಷ್ಟದಲ್ಲೇ ಪರಿಣಮಿಸಿದರೆ, ಅದೊಂದು ಲಯಬಲಿಟಿ ಯಾಗುತ್ತದೆ. ಆದರೆ ನಮ್ಮ ದೇಶ ಹಳ್ಳಿಗಳ ದೇಶವಾಗಿದೆ. ಲಾಭ ಬರಲಿ, ಬರದಿರಲಿ, ಹೆಚ್ಚು ಪ್ರಮಾಣದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ರೂರಲ್ ಎಲೆಕ್ಟ್ರಿಫಿಕೇಷನ್ ಅಂದರೆ ಹಳ್ಳಿಗಳಲ್ಲಿ ಬರೀ ದೀಪ ಹಚ್ಚುವ ಕಾರ್ಯಕ್ರಮವಲ್ಲ. ಹಳ್ಳಿಯಲ್ಲಿರುವಂಥ ಎಲ್ಲಾ ಬಾವಿಗಳಿಗೂ ಪಂಪು ಸೆಟ್ಟುಗಳನ್ನು ಕೊಡುವಂಥ ಕಾರ್ಯಕ್ರಮ ಅದರಲ್ಲಿ ಅಳವಡಿಸಿಕೊಂಡಿದೆ. ಅದನ್ನು ಈಗಾಗಲೇ ಮಾಡಿದ್ದೇವೆ. ಮೂರನೆಯ ಪಂಚವಾರ್ಷಿಕ ಯೋಜನೆಯೊಳಗೆ ಸಾವಿರಾರು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೇವೆ, ಪಂಪುಸೆಟ್ಟುಗಳನ್ನು ಒದಗಿಸಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 5 ಸಾವಿರ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಮಾಡಬೇಕು ಮತ್ತು 30 ಸಾವಿರ ಪಂಪುಸೆಟ್ಟುಗಳನ್ನು ಸರ್ವೀಸ್ ಮಾಡಬೇಕು ಎಂಬ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಇನ್ನು ಕೇಂದ್ರದಿಂದ ಕ್ರಾಷ್ ಪ್ರೋಗ್ರಾಮಿ

ನಂತೆ ಹೆಚ್ಚು ಪ್ರಮಾಣದಲ್ಲಿ ಸಹಾಯ ಬಂದರೆ, 30 ಸಾವಿರವಲ್ಲ, 1 ಲಕ್ಷದವರೆಗೆ ಹೋಗುವುದಕ್ಕೆ ಸಾಧ್ಯವಿದೆ.

ಬೋರ್ಡಿಗೆ ಏನೇನು ಮೆಟೀರಿಯಲ್ಸ್ ಬೇಕೊ, ಅವುಗಳನ್ನು ಕಲೆಕ್ಟ್ ಮಾಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೊ ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಸುಮಾರು 17 ಕೋಟಿ ರೂಪಾಯಿನ ಮೆಟೀರಿಯಲ್ಲುಗಳಿಗೆ ಈಗಾಗಲೆ ನಾವು ಆರ್ಡರ್ ಪ್ಲೇಸ್ ಮಾಡಿದ್ದೇವೆ. ಅವು ಕಾಂಟ್ರಾಕ್ಟ್ ಪ್ರಕಾರ, 3-3 ತಿಂಗಳಿಗೆ, ಡೆಲಿವರಿ ಪೀರಿಯಡ್ಡುಗಳಿದ್ದಂತೆ ಬರುತ್ತವೆ. ಈಗಾಗಲೆ 7 ಕೋಟಿ ರೂಪಾಯಿವರೆಗೆ ನಮ್ಮ ಹತ್ತಿರ ಸ್ಟಾಕ್ ಇರುವುದಲ್ಲದೆ, ಇನ್ನೂ 17 ಕೋಟಿ ರೂಪಾಯಿ ಮೆಟೀರಿಯಲ್ಲುಗಳಿಗೆ ಆರ್ಡರ್ ಪ್ಲೇಸ್ ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಹೇಳುವಾಗ, 7 ಕೋಟಿ ರೂಪಾಯಿ ಮೆಟೀರಿಯಲ್ಸ್ ಇಟ್ಟುಕೊಂಡು ಸುಮ್ಮನೆ ಕೂತಿದ್ದಾರೆಂದು ಹೇಳಿದರು. ಅದು ಸುಮ್ಮನೆ ಕೂಡುವ ಪ್ರಶ್ನೆ ಅಲ್ಲ. ಇವತ್ತಿನ ದಿವಸ ಎಲ್ಲಾ ಕಡೆಗೆ ವಿದ್ಯುಚ್ಛಕ್ತಿ ಕೊಡುವ ಯೋಜನೆ ಇದ್ದು, ಬಹಳ ದೊಡ್ಡ ಪ್ರಮಾಣದಲ್ಲಿ, ಬಹಳ ವೇಗದಿಂದ ಹೋಗುತ್ತಾ ಇರುವುದರಿಂದ, ಎಲೆಕ್ಟ್ರಿಸಿಟಿ ಬೋರ್ಡಿನವರು ಕೆಲವು ಮ್ಯಾನುಫ್ಯಾಕ್ಚರರುಗಳು ಏನಿದ್ದಾರೆ ಅವರುಗಳ ಹತ್ತಿರ ಸಾಕಷ್ಟು ಪ್ರಮಾಣದಲ್ಲಿ ಆರ್ಡರ್ ಪ್ಲೇಸ್ ಮಾಡಿದ್ದಾರೆ. ನಮಗೆ ಕಂಡಕ್ಟರುಗಳು, ಸ್ವಿಚ್‌ಗೇರುಗಳು, ಇನ್‌ಸುಲೇಟರುಗಳು ಬೇಕು. ಆರ್ಡರ್ ಪ್ಲೇಸು ಮಾಡಿ ಒಂದೊಂದು ವರ್ಷವಾದರೂ, ಟ್ರಾನ್ಸ್‌ಫಾರ್ಮರುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಟ್ರಾನ್ಸ್‌ಫಾರ್ಮರುಗಳನ್ನು ಮ್ಯಾನುಫ್ಯಾಕ್ಚರ್ ಮಾಡುವ ಯೂನಿಟ್ ಇರುವುದರಿಂದ, ಎದುರನೆ ಪ್ರಾಂತ್ಯದವರು ನಮ್ಮ ಮಂತ್ರಿಗಳಿಗೆ ಅವರ ರಿಕ್ವಯರ್‌ಮೆಂಟ್ಸ್‌ನ್ನು ಬೇಗ ತಯಾರು ಮಾಡಿಕೊಡಲು ಶಿಫಾರಸು ಮಾಡಿ ಟ್ರಾನ್ಸ್‌ಫಾರ್ಮರುಗಳು ಬೇಕು, ಆರ್ಡರ್ ಮಾಡಿದ್ದೇವೆ, ಸ್ವಲ್ಪ ತೀವ್ರ ಕೊಡುವುದಕ್ಕೆ ಹೇಳಿ ಎಂದು ಹೇಳುತ್ತಿದ್ದಾರೆ. ನಮ್ಮ ಫ್ಯಾಕ್ಟರಿಯೂ ಹಗಲೂ ರಾತ್ರಿ ಕೆಲಸ ಮಾಡುತ್ತಿದೆ. ಈ ಮೆಟೀರಿಯಲ್ಲುಗಳಿಗೆ ಎಲ್ಲ ಕಡೆಯೂ ಇಷ್ಟು ಡಿಮ್ಯಾಂಡ್ ಇರುವುದರಿಂದ, ನಾವು ಈ ರೀತಿಯಲ್ಲಿ ಶೇಕರಣೆ ಮಾಡಿಟ್ಟುಕೊಳ್ಳದೆ ಹೋದರೆ, ಅವು ನಮಗೆ ಬೇಕಾದಾಗ ಸಾಕಷ್ಟು ಪ್ರಮಾಣದಲ್ಲಿ ಸಿಗಲಾರದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಹೆಚ್ಚು ಮೆಟೀರಿಯಲ್‌ಗಳಿಗೆ ಆರ್ಡರ್ ಪ್ಲೇಸು ಮಾಡಿ, ಸ್ಟಾಕ್ ಮಾಡಿಟ್ಟುಕೊಳ್ಳುವುದು ಬಹಳ ಅವಶ್ಯಕ. ಒಂದು ವೇಳೆ ಸ್ಟಾಕ್ ಮಾಡಿಕೊಳ್ಳಲಿಲ್ಲವೆಂದರೆ ಹೆಚ್ಚು ಪ್ರಮಾಣದಲ್ಲಿ ಸ್ಟಾಕ್ ಮಾಡಲಿಲ್ಲವೆಂದರೆ ವಿದ್ಯುಚ್ಛಕ್ತಿ ಜಾಸ್ತಿಮಾಡಿಕೊಳ್ಳುವುದು ಹೇಗೆ ? ಮೆಟೀರಿಯಲ್ಲಿಗೆ ಆರ್ಡರ್ ಮಾಡುತ್ತಿದ್ದ ಹಾಗೆ ದುಡ್ಡು ಇಟ್ಟುಕೊಳ್ಳಬೇಕಾಗುತ್ತದೆ. ಅದು ಬಿಟ್ಟು ಮೆಟೀರಿಯಲ್ ಬಂದಾಗ ಲೋನ್ ಫ್ಲೋಟ್ ಮಾಡುವ ಯೋಚನೆ ಮಾಡಿದರೆ, ಯಾರು ಪೇಮೆಂಟಿಗೆ ಕಾಯುತ್ತಾರೆ ? ಅದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರು, ಒಂದು ವರ್ಷದ ಕಾರ್ಯಕ್ರಮ ಹಾಕಿಕೊಂಡು, ಈ ವರ್ಷವೇ ಮುಂದಿನ ವರ್ಷಗಳ ಕಾರ್ಯಕ್ರಮಕ್ಕೆ ಎಷ್ಟು ದುಡ್ಡು ಬೇಕಾಗುತ್ತದೆಂದು ಲೆಕ್ಕ ಹಾಕಿ, ಈ ವರ್ಷವೇ ಲೋನ್ ಫ್ಲೋಟ್‌ಮಾಡಿ, ದುಡ್ಡು ಸಿದ್ಧಮಾಡಿ ಇಟ್ಟುಕೊಂಡಿರುತ್ತಾರೆ. ಈ ಸಂದರ್ಭದಲ್ಲಿಯೇ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದರು ; ಅದೇನೆಂದರೆ, ನಾಲ್ಕುವರೆ ಪರ್ಸೆಂಟಿಗೆ ಲೋನ್ ತೆಗೆದುಕೊಂಡು, ಮೂರುವರೆ ಪರ್ಸೆಂಟಿನಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದೇವೆ ಎಂದು. ಇದರಿಂದ ನಾವು ಒಂದು ಲಾಭ ಮಾಡಬೇಕೆಂದು ಅವರ ಉದ್ದೇಶವೇನೊ ? ಈಗ ತಾವು ಇದನ್ನು ವಿಚಾರ ಮಾಡಬೇಕು ; ಸ್ಟೇಷನ್ನಿಗೆ ಮಾಲು ಬಂದಿದೆ ಅನ್ನುವಾಗ, ಸರಕಾರವಾಗಲಿ, ಬೋರ್ಡಾಗಲಿ, ಡೆಲಿವರಿ ಈಗ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ದುಡ್ಡು ಇಲ್ಲ, ತಡೆಯಿರಿ ಎಂದು ಹೇಳ್ಳುವುದಕ್ಕಾಗುತ್ತದೆಯೆ ? ಆ ಮೆಟೀರಿಯಲ್ಲುಗಳನ್ನು ತಿಂಗಳಾನುಗಟ್ಟಲೆ, ದುಡ್ಡು ಸಿಗುವವರೆಗೂ ಹಾಗೆಯೇ ಬಿಟ್ಟಿರುವುದಕ್ಕಾಗುತ್ತದೆಯೆ ? ಆದ್ದರಿಂದ ಮುಂಜಾಗ್ರತೆ ವಹಿಸಿ, ಸಕಾಲದಲ್ಲಿ ದುಡ್ಡು ಶೇಖರಣೆ ಮಾಡಿಟ್ಟುಕೊಂಡು, ಅದನ್ನು ಲಾಂಗ್‌ಟರ್ಮ್ ಅಥವ ಷಾರ್ಟ್‌ಟರ್ಮಿನಲ್ಲಿ ಇನ್‌ವೆಸ್ಟ್ ಮಾಡಿ, ಅದರ ಮೇಲೆ ಮೂರುವರೆ ಪರ್ಸೆಂಟ್ ಬಡ್ಡಿ ಬರುವಂಥ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಆದ್ದರಿಂದ, ಇಲ್ಲಿ ಯಾವ ಬ್ಯಾಂಕಿಗೂ ಉಪಕಾರ ಮಾಡುವ ಪ್ರಶ್ನೆಯೇ ಇಲ್ಲ ; ಹಾಗೆಯೇ ನಮಗೂ ಅವರು ಉಪಕಾರ ಮಾಡುವ ಪ್ರಶ್ನೆ ಇಲ್ಲ. ಇಂಥ ಒಂದು ವಿಶೇಷ ಪರಿಸ್ಥಿತಿಯಲ್ಲಿ, ಈ ಒಂದು ಕ್ರಮ ಅನುಸರಿಸುವುದು ಅನಿವಾರ್ಯವಾಗಿದೆ, ಅಷ್ಟೆ.

ಹಳ್ಳಿಗಳಿಗೆ ವಿಶೇಷವಾಗಿ ವಿದ್ಯುಚ್ಛಕ್ತಿ ಒದಗಿಸಿಕೊಡಬೇಕೆಂದಿದ್ದೇವೆ. ಅದರಲ್ಲೂ ಬಾರ್ಡರಿನಲ್ಲಿರುವ ಹಳ್ಳಿಗಳಿಗೆ ಆದಷ್ಟು ತೀವ್ರವಾಗಿ ವಿದ್ಯುಚ್ಛಕ್ತಿ ಕೊಡಬೇಕೆನ್ನುವ ಸಲುವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮಹಾರಾಷ್ಟ್ರ ಜಿಲ್ಲೆಯ ಬಾರ್ಡರುಗಳಲ್ಲಿರುವ ಹಳ್ಳಿಗಳಲ್ಲಿ ಆ ದೇಶದವರು ವಿದ್ಯುಚ್ಛಕ್ತಿ ಕೊಟ್ಟಿರುವುದರಿಂದ ಆಚೆಕಡೆ ಹಳ್ಳಿಗಳಲ್ಲಿರುವ ಮನೆಗಳ ಮೇಲೆ ನಿಂತು ನೋಡಿದರೆ ಈಚೆಗಡೆ ಹಳ್ಳಿಗಳಲ್ಲಿ ಅಲ್ಲಿರುವ ದೀಪಗಳು ಕಾಣುತ್ತವೆ. ಅದರಿಂದ ನಮ್ಮ ಬಾರ್ಡರಿನಲ್ಲಿರುವ ಹಳ್ಳಿಗಳಿಗೂ ಕೂಡ ದೀಪ ಕೊಡಬೇಕೆಂದು ಕೇಳುತ್ತಾರೆ. ಅದಕ್ಕಾಗಿ ಅಲ್ಲಿನ ಕೆಲಸಗಳನ್ನು ಬೇಗ ಪ್ರಾರಂಭ ಮಾಡಬೇಕೆಂದು ಈಗಾಗಲೇ ಬೆಳಗಾಂವರೆಗೆ ಲೈನುಗಳನ್ನು ಹಾಕಲಾಗಿದೆ. ಆದರೆ

(ಶ್ರೀ ವೀರೇಂದ್ರ ಪಾಟೀಲ್)

ಅಲ್ಲಿಂದ ಮುಂದಕ್ಕೆ ಇನ್ನೂ ತೆಗೆದುಕೊಂಡು ಹೋಗುವುದಕ್ಕೆ ಆಗಿಲ್ಲ. ಇದಕ್ಕಾಗಿ ದುಡ್ಡು ಕೂಡ ಒದಗಿಸಲಾಗಿದೆ. ಇವರ ಬಗ್ಗೆ ವಿಚಾರ ಮಾಡಿಕೊಂಡು ಯಾವ ರೀತಿ ಇಂಗೆ ಲೈನುಗಳನ್ನು ತೆಗೆದು ಕೊಂಡು ಹೋಗಿ ಎಲೆಕ್ಟ್ರಿಫೈ ಮಾಡಬೇಕೆನ್ನುವುದಕ್ಕೆ ಈಗಾಗಲೇ ರೋಡುಗಳಾಗುತ್ತಿವೆ. ಇನ್ನೂ ಅದಷ್ಟು ತೀವ್ರವಾಗಿ ಮಾಡುವುದರಲ್ಲಿದ್ದೇವೆ ಎಂದು ಇಲ್ಲಿ ಹೇಳುತ್ತೇನೆ.

ಕೊನೆಯದಾಗಿ 'ಪ್ರೈವೇಟ್ ಎಲೆಕ್ಟ್ರಿಸಿಟಿ ಅಂಡರ್ ಟೇಕಿಂಗ್ಸ್' ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಇದು ಬಾಂಬೆ ಕರ್ನಾಟಕದಲ್ಲಿ ಇದೆ. ಆದರೆ ಇದು ಹೈದರಾಬಾದು ಕರ್ಣಾಟಕದಲ್ಲಿಲ್ಲ. ಮದರಾಸಿ ನಲ್ಲೂ ಇಲ್ಲ ಮತ್ತೆಲ್ಲಿಯೂ ಇಲ್ಲ. ನನಗನಿಸುವುದು, ಈಗಿರುವ ಕಾರ್ಯಕ್ರಮವನ್ನು ಮುಗಿಸಲು ಅವರುಗಳು ಒಂದು ಅಗ್ರಿಮೆಂಟು ಮಾಡಿಕೊಂಡಿರುತ್ತಾರೆ. ಅದು ಮುಗಿದ ಮೇಲೆ ಅದನ್ನು ಸರ ಕಾರದವರೇ ವಹಿಸಿಕೊಳ್ಳಬೇಕು. ನ್ಯಾಷನಲೈಸು ಮಾಡಬೇಕಾದರೆ ಅದಕ್ಕಾಗಿ ಒಂದು ಬಿಲ್ಲನ್ನು ತರಬೇಕಾಗುತ್ತದೆ. ಎಲ್ಲಾ ಕಡೆಗಳಲ್ಲಿರುವ ಪ್ರೈವೇಟು ಅಂಡರ್ ಟೇಕಿಂಗ್ಸ್‌ಗಳನ್ನು ನ್ಯಾಷನಲೈಸು ಮಾಡಬೇಕಾದರೆ ಕೋಟಿಗಟ್ಟಲೆ ಹಣವನ್ನು ಸುರಿಯಬೇಕಾಗುತ್ತದೆ. ಇದಕ್ಕಾಗಿ ಟ್ರಾನ್ಸ್‌ಮಿಷನ್ ಲೈನುಗಳನ್ನು ಹಾಕಿ ಅದಷ್ಟು ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡ ಬೇಕೆಂದು ಇದೆ. ಇದರಲ್ಲಿ ನ್ಯಾಷನಲೈಸು ಮಾಡಬೇಕೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಅಲ್ಲದೆ ಈಗ ಖಾಸಗಿಯವರು ನಡೆಸುತ್ತಿರುವ ಕಂಪನಿಗಳಲ್ಲಿ ರೇಟುಗಳು ಬಹಳ ಹೆಚ್ಚು ಹಾಕುತ್ತಿದ್ದಾ ರೆಂಬ ಕೂಗಿದೆ. ಆದರೆ ನಾವು ಈಗ ಏನೂ ಮಾಡಲಿಕ್ಕೆ ಆಗುವುದಿಲ್ಲ. ಅವರಿಗೆ ಆಗಿರುವ ಅಗ್ರಿಮೆಂಟು ಪ್ರಕಾರ ಅವರ ಅವಧಿ ಮುಗಿಯಬೇಕು. ಆ ಅವಧಿ ಮುಗಿದ ಮೇಲೆ ಸರ್ಕಾರದವರೇ ಅವರಿಗೆ ನೇರ ವಾಗಿ ಪವರನ್ನು ಸಪ್ಲೆ ಮಾಡಲು ಪ್ರಾರಂಭ ಮಾಡುತ್ತಾರೆ. ಆಗ ರೇಟುಗಳನ್ನು ಕೊಡುವಾಗಲೂ ಅವರಿಗೆ ರಿಯಾಯಿತಿಗಳು ಸಿಗುತ್ತದೆ. ಈಗಲೇ ಪ್ರೈವೇಟು ಕಂಪನಿಗಳನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಬಹುಶಃ ನ್ಯಾಷನಲೈಸು ಮಾಡವುದಕ್ಕೆ ಬರುವುದಿಲ್ಲ. ಏಕೆಂದರೆ, ಕಾಂಪನ್ ಸೇಷನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ. ಅದರಿಂದ ಇದಕ್ಕಾಗಿ ಈಗ ಯಾವ ಲೆಜಿಸ್ಲೇಷನ್ನು ಮಾಡುವ ಅವಶ್ಯಕತೆ ಇಲ್ಲ. ಇಲ್ಲಿ ನ್ಯಾಷನಲೈಸ್ ಮಾಡುವ ಅವಶ್ಯಕತೆ ಇಲ್ಲ. ಅಲ್ಲದೆ ಅವರಿಗೆ ಕೊಟ್ಟಿ ರುವ ಲೈಸನ್ಸನ್ನು ಪುನಃ ರಿನ್ಯೂ ಮಾಡಲಿಕ್ಕೆ ಹೋಗುವುದಿಲ್ಲ. ಅವರ ಪೀರಿಯಡ್ ಎಕ್ಸ್‌ಪೈರ್ ಆದ ಕೂಡಲೇ ಅದನ್ನು ನಾವೇ ವಹಿಸಿ ಕೊಂಡು ಪವರನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಅದರಂತೆ ಈಗ ಪ್ರೈವೇಟು ಕಂಪನಿಯವರು ಬೀದರ್‌ನಲ್ಲಿ ಸರಕಾರಕ್ಕೆ ವಹಿಸಿ ಕೊಡಲು ಸಿದ್ಧರಾಗಿದ್ದೇವೆ ಎಂದ ಅವರು ಒಪ್ಪಂದಕ್ಕೆ ಬಂದಿದ್ದಾರೆ, ಅವರಿಗೇನೋ ಸ್ವಲ್ಪ ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ. ಅದರಂತೆ ಕೊಟ್ಟು ಅಲ್ಲಿನ ಆಡಳಿತವನ್ನು ಸರಕಾರ ತೆಗೆದುಕೊಳ್ಳುತ್ತದೆ. ಅದರಂತೆ ಇನ್ನೂ ಇತರ ಕಂಪನಿಗಳವರು ಯಾರ್ಯಾರು ಒಪ್ಪುತ್ತಾರೋ ಅವರ ಆಡಳಿತವನ್ನೂ ಸರಕಾರಕ್ಕೆ ವಹಿಸಿಕೊಂಡು ಇನ್ನೂ ಚಿಕ್ಕ ಹಳ್ಳಿಗಳಿಗೆ ಪವರನ್ನು ಕೊಡಲು ದುಡ್ಡು ಖರ್ಚು ಮಾಡಬೇಕಾಗುತ್ತದೆ. ನ್ಯಾಷನಲೈಸ್ ಮಾಡಬೇಕಾದರೆ ಅದಕ್ಕಾಗಿ ಹೆಚ್ಚು ದುಡ್ಡು ಖರ್ಚಾಗ ಬೇಕಾಗುತ್ತದೆ. ಇವೆಲ್ಲ ವಿಚಾರಗಳನ್ನೂ ಇಟ್ಟುಕೊಂಡು ಯಾವ ಯಾವ ಪ್ರೈವೇಟು ಎಲೆಕ್ಟ್ರಿಸಿಟಿ ಅಂಡರ್ ಟೇಕಿಂಗ್‌ಗಳು ಇವೆಯೋ ಅದರ ಪೀರಿ ಯಡ್ ಮುಗಿದ ಕೂಡಲೇ ಅದನ್ನು ಸರಕಾರದವರೇ ನಡೆಸುತ್ತಾರೆ. ಈಗ ಕಂಪನಿಗಳವರು ಹಾಕು ತ್ತಿರುವ ದರಗಳು ಹೆಚ್ಚಾಗಿವೆ ಎಂದು ನಮಗೂ ದೂರುಗಳು ಬಂದಿವೆ. ಅವರ ಅಗ್ರಿಮೆಂಟ್ ಮುಗಿದ ಕೂಡಲೇ ಇದನ್ನೂ ನಾವೇ ಮಾಡಬೇಕೆಂದು ವಿಚಾರ ಮಾಡಿದ್ದೇವೆ. ನ್ಯಾಷನಲೈಸ್ ಮಾಡುವ ಪರಿಸ್ಥಿತಿ ಇಲ್ಲಿ ಈಗ ಬರುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೆಷ್ಟು ವರ್ಷಗಳಲ್ಲಿ ಇವರ ಒಪ್ಪಂದಗಳ ಅವಧಿ ಮುಗಿಯು ತ್ತವೆ ?

ಶ್ರೀ ವೀರೇಂದ್ರ ಪಾಟೀಲ್.—ಅದರ ವಿವರಗಳು ಇಲ್ಲಿಲ್ಲ. ಈಗ ಯಾವ ಅವಧಿ ಅಗ್ರಿಮೆಂಟು ಪ್ರಕಾರ ಇದೆಯೋ ಅದು ಮುಗಿದ ಕೂಡಲೆ ಅದನ್ನು ನಾವೇ ವಹಿಸಿಕೊಂಡು ಕೆಲಸ ಮಾಡುತ್ತೇವೆ. ಇನ್ನು ರಿನ್ಯೂ ಮಾಡಲಿಕ್ಕೆ ಬರುವ ಪ್ರಶ್ನೆಯೇ ಇಲ್ಲ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಕೊನೆಯ ತಾರೀಖು ಯಾವುದು ?

ಶ್ರೀ ವೀರೇಂದ್ರ ಪಾಟೀಲ್.—ಈಗ ಇರುವ ಖಾಸಗಿ ಕಂಪನಿಗಳು ಒಂದೇ ಕಡೆಯಲ್ಲಿ ಇಲ್ಲ. ಅನೇಕ ಕಡೆಗಳಲ್ಲಿವೆ; ಅವರವರ ಕಂಟ್ರಾಕ್ಟು ಅಥವಾ ಅಗ್ರಿಮೆಂಟು ಎಷ್ಟು ವರ್ಷಗಳಿಗಾಗಿ ಮಾಡಿ ದ್ದಾರೋ ಅವುಗಳ ಅವಧಿ ಮುಗಿದ ಕೂಡಲೇ ಅವುಗಳ ಆಡಳಿತವನ್ನು ನಾವು ವಹಿಸಿಕೊಳ್ಳುತ್ತೇವೆ. ಅದಷ್ಟು ತೀವ್ರವಾಗಿ ಜನರಿಗೆ ತೊಂದರೆ ಕೊಡದಂತೆ ಮಾಡಬೇಕೆಂದು ಇದ್ದೇವೆ. ಮತ್ತು ನಾವು

ಕೊಡುವುದು cheap power supply ಮತ್ತು ದರ ಕೂಡ ಕಡಿಮೆ ಆದರೆ ಈಗ ಡೀಸಲ್ ಸೆಟ್ ನಿಂದ ಪಡೆಯುವ ಪವರಿನ ದರ ಹೆಚ್ಚು. ನಮ್ಮ ದರ ಬಹಳ ಕಡಿಮೆ ಎಂದು ಈ ಸಂದರ್ಭದಲ್ಲಿ ಸ್ಪಷ್ಟ ಪಡಿಸುತ್ತೇನೆ.

Sri N. O. Sonji (Marathi).

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಇಲ್ಲಿ ಕಂಬಗಳನ್ನು ತರಿಸಿಕೊಂಡು ಲೈನು ಹಾಕುತ್ತಿದ್ದೇವೆ. ಬಹುಶಃ ಇನ್ನು ಕೆಲವು ತಿಂಗಳಲ್ಲಿ ಮುಗಿಯ ಬಹುದು ಎಂದು ನನಗನಿಸುತ್ತದೆ. ಅಲ್ಲದೆ ಟ್ರಾನ್ಸ್‌ಮಿಷನ್ನು ಲೈನು ನಮ್ಮ ಬೆಳಗಾಂ ಬಾರ್ಡರಿನವರೆಗೂ ತಂದು ಅವರಿಗೂ ಪವರು ಸಪ್ಲೈ ಮಾಡಿದರೆ ಅದರ ದರವೂ ಕಡಿಮೆ ಬರುತ್ತದೆ. ಅಲ್ಲದೆ ನಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೆಂದರೆ, ಪ್ರೈವೇಟ್ ಅಂಡರ್ ಟೇಕಿಂಗ್ಸ್‌ನವರು ಹಾಕುತ್ತಿರುವ ದರ ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. 70 ರಿಂದ 75 ನಯಾಪೈಸೆಯಷ್ಟು ಒಂದು ಯೂನಿಟ್ಟಿಗೆಂದು ವಸೂಲು ಮಾಡುತ್ತಿದ್ದಾರೆ. ಇಲ್ಲಿಗೆ ವಿದ್ಯುಚ್ಛಕ್ತಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸದೇ ಇರುವ ಕಾರಣದಿಂದಾಗಿ ಇದರ ದರ ಇಲ್ಲಿ ಹೆಚ್ಚಾಗಿದೆ. ಮುಂದೆ ನಾವು ಪವರು ಕೊಟ್ಟ ಮೇಲೆ ಒದಗಿಸುವ ದರ ಕಡಿಮೆಯಾಗುತ್ತದೆ. ಈಗ ನಮ್ಮ ಬೋರ್ಡಿನವರೇ ನೇರವಾಗಿ ಇಲ್ಲಿಗೆ ಪವರು ಕೊಡಲು ಆಗುವುದಿಲ್ಲ. ಖಾಸಗಿ ಕಂಪನಿಗಳವರ ಅಗ್ರಿಮೆಂಟು ಪೀರಿಯಡ್ಡು ಮುಗಿಯದೇ ನಾವೇನೂ ಮಾಡಲಿಕ್ಕೆ ಬರುವುದಿಲ್ಲ. ಅಗ್ರಿಮೆಂಟು ಅವಧಿ ಮುಗಿದ ಮೇಲೆ ಇದರ ಜವಾಬುದಾರಿಯನ್ನು ಬೋರ್ಡು ವಹಿಸಿಕೊಂಡು ಕೆಲಸ ಮಾಡಬೇಕಾಗಿದೆ. ಶರಾವತಿ ಯೋಜನೆಯಾದಮೇಲೆ ಬೋರ್ಡಿನವರಿಗೆ ಇನ್ನೂ ದೊಡ್ಡ ಜವಾಬುದಾರಿ ಬಿದ್ದಿದೆ. ಇದಕ್ಕಾಗಿ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ಹಾಗೆ ಕೆಲಸ ಮಾಡುತ್ತಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಅನೇಕ ಕಡೆಗಳಲ್ಲಿ ಕೆಲಸ ಮಾಡಲು ಅದಕ್ಕೆ ಬೇಕಾಗುವ ಮೆಟೀರಿಯಲ್ಸ್ ಸಿಕ್ಕುತ್ತಿಲ್ಲ. ಅದಕ್ಕಾಗಿ ಈಗ ಸ್ಟೀಲು ಕಂಬಗಳ ಬದಲು ಸಿಮೆಂಟಿನ ಕಂಬಗಳನ್ನೇ ಬೋರ್ಡಿನವರೇ ತಯಾರಿಸಿ ಅದನ್ನು ಉಪಯೋಗಿಸಬೇಕೆಂದು ಮಾಡುತ್ತಿದ್ದಾರೆ. ಈಗ ಕಬ್ಬಿಣ ಮತ್ತು ಉಕ್ಕಿನ ಕಂಬಗಳನ್ನು ತರಿಸಬೇಕೆಂದು ಕಾಯಬೇಕಾಗಿಲ್ಲ. ಇದಕ್ಕೆ ಬದಲು ಸಿಮೆಂಟು ಕಂಬಗಳನ್ನೇ ಮಾಡಿಸಿ ಉಪಯೋಗಿಸುತ್ತಿದ್ದಾರೆ.

ಕೊನೆಯದಾಗಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾಡಿರುವ ವರದಿ ಬಗ್ಗೆ ಇಲ್ಲಿ, ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದರು. ಅವರೇನು ಆಬ್‌ಜಕ್ಷನ್‌ಗಳು ಮಾಡಿದ್ದಾರೆ ಅದಕ್ಕೆ ಬೋರ್ಡಿನವರು ಏನು ಉತ್ತರಗಳು ಹಾಗೂ ಎಕ್ಸ್‌ಪ್ಲನೇಷನ್ನುಗಳನ್ನು ಕೊಟ್ಟಿದ್ದಾರೆ ಅವುಗಳ ಎಲ್ಲ ವಿವರಗಳು ಬಹಳ ದೊಡ್ಡದಾಗಿದೆ. ಅದರ ಪೂರ್ತಿ ಪಟ್ಟಿಯನ್ನು ಈ ಸಭೆಯ ಮುಂದೆ ಇಡುತ್ತೇನೆ. ಮಾನ್ಯ ಸದಸ್ಯರೇ ಅವನ್ನೆಲ್ಲಾ ಪೂರ್ತಿಯಾಗಿ ಓದಿ ತಿಳಿದುಕೊಳ್ಳಬಹುದು.

ಇನ್ನೊಂದು ವಿಚಾರ ಇದೆ. ಖಾದಿ ಬೋರ್ಡಿನ ಹಾಗೆ ಇಲ್ಲಿಯೂ ಕೂಡ ದುರ್ವ್ಯವಹಾರ ನಡೆದಿದೆ ಎನ್ನುವ ಮಾತನ್ನು ಹೇಳಿದರು. ಆ ತರಹ ಏನೂ ಇಲ್ಲಿ ಆಗಿಲ್ಲ. 1956-57 ನೇ ಇಸವಿಯಲ್ಲಿ ಹೊಸ ರಾಜ್ಯ ಆದ ಮೇಲೆ ಯಾವ ಯಾವ ರಾಜ್ಯದಲ್ಲಿ ಏನೇನು ಸಾಮಾನುಗಳಿದ್ದವು ಅದನ್ನು ನೋಡಿ ಅನಂತರ ಅದರ ಸ್ಟಾಟಿಸ್‌ಸ್ಟಿಕ್ಸ್ ತಯಾರು ಮಾಡಲು ಪ್ರತಿಯೊಂದು ಅಸೆಟ್ಸ್ ಹಾಗೂ ಸ್ಟಾಕುಗಳನ್ನು ನೋಡಿ ತೆಗೆಯಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಅದಕ್ಕಾಗಿ ಈಗಾಗಲೇ 1962-63ರ ಬಡ್ಜೆಟ್ಟನ್ನು ಅಕೌಂಟುಗಳನ್ನು ಆಡಿಟ್ ಮಾಡಿದ್ದಾರೆ. ಅವನ್ನೂ ಈಗ ಅಕೌಂಟೆಂಟುಜನರಲ್ ರವರಿಗೆ ಕಳುಹಿಸಿ ಅದರ ಸರ್ಟಿಫಿಕೇಟ್ ಪಡೆಯಬೇಕಾಗಿದೆ. ಅವರ ಸರ್ಟಿಫೀಕೆಟನ್ನು ಪಡೆದನಂತರ ಆ ವರದಿ ಈ ಮಾನ್ಯ ಸಭೆಯ ಸದಸ್ಯರ ಮುಂದೆ ಬರುತ್ತದೆ. ಸುಮಾರು ಇನ್ನು ಹದಿನೈದು ದಿನ ಅಥವಾ ಒಂದು ತಿಂಗಳೊಳಗಾಗಿ ಅಕೌಟೆಂಟು ಜನರಲ್‌ರವರು ಸರ್ಟಿಫಿಕೇಟನ್ನು ಬೋರ್ಡಿನವರಿಂದ ತರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಅಷ್ಟು ಹೊತ್ತಿಗೆ ಬರುತ್ತದೆ. ಅಲ್ಲದೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅವರ ವರದಿಯಲ್ಲಿ ಒಂದು ಲಕ್ಷ ರೂಪಾಯಿಗಳಷ್ಟು ಅರಿಯರ್ಸ್ ಇದೆ ಎಂದು ಹೇಳಿದ್ದಾರೆ. ಇದನ್ನು ಇಲ್ಲಿ ಕೆಲವರು ಒಂದು ಕೋಟಿ ಎಂದರು ಅದು ಸರಿಯಲ್ಲ. ಇದರಲ್ಲಿರುವಂತೆ ಇದು ಒಂದು ಲಕ್ಷ ಚಿಲ್ಲರೆ ಇದೆ. ಪ್ರತಿ ವರ್ಷ ಬೋರ್ಡಿನ ಬಡ್ಜೆಟ್ 12 ಕೋಟಿಯಷ್ಟಿದೆ. ಪ್ರತಿವರ್ಷ ಸುಮಾರು ಒಂದು ಲಕ್ಷದಷ್ಟು ಅರಿಯರ್ಸ್ ಇದ್ದರೆ ಅದನ್ನು ವಸೂಲ್ ಮಾಡಲು ಟೈಂ ಬೇಕಾಗುತ್ತದೆ. ತಮಗೆ ತಿಳಿದಿರುವಂತೆ ಅನೇಕ ಕಡೆಗಳಲ್ಲಿ ಮುನಿಸಿಪಾಲಟಿಗಳವರಿಗೆ ಸಾಲವಾಗಿ ಕೊಟ್ಟಿರುವ ಹಣವೇ ವಾಪಸು ಬರುತ್ತಿಲ್ಲ. ಇಲ್ಲಿ ಹಾಗೇನೂ ಆಗಿಲ್ಲ. ಇದರ ಲೆಕ್ಕ ಪತ್ರಗಳು ಸರಿಯಾಗಿವೆಯೋ ಎನ್ನುವುದನ್ನು ವಿಚಾರ ಮಾಡುತ್ತಿದ್ದಾರೆ. ಇದೂ ಅಲ್ಲದೆ ಎಲೆಕ್ಟ್ರಿಸಿಟಿ ಬೋರ್ಡಿನ ಬಗ್ಗೆ ಗುಂಡ್ಲುಪೇಟೆಯ ಮಾನ್ಯ ಸದಸ್ಯರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಬಹಳ ದೊಡ್ಡದಾಗಿ ಇಲ್ಲಿ ಹೇಳಿದರು ಅವರು ಒಂದೊಂದು ದಿನ ಕರೆಂಟನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆಂದು ಹೇಳಿದರು.

(ಶ್ರೀ ವೀರೇಂದ್ರ ಪಾಟೀಲ್)

ಅರಿಯರ್ಸ್ ವಸೂಲ್ಮಾಡುವುದರಲ್ಲಿ ಟೈಂ ಬಾರ್ ಆಗಿದೆ, ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ ಎಂದು ಟೀಕೆ ಮಾಡಿದರು. ಆದರೆ ಈಗ ಅರಿಯರ್ಸ್ ಇಲ್ಲ, ಟೈಂ ಬಾರ್ ಆಗಿಲ್ಲ ಎಂದು ಹೇಳುತ್ತೇನೆ. ಬಾಕಿ ಹಣ ವಸೂಲ್ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ.

ಶ್ರೀಮತಿ ನಾಗರತ್ನಮ್ಮನವರು ಒಂದು ದೂರು ಹೇಳಿದರು. ಅದನ್ನು ಎಗ್ಸಾಮಿನ್ ಮಾಡುತ್ತಿದ್ದೇವೆ. ಇನ್ನುಮುಂದೆ ಆ ರೀತಿ ಆಗದಂತೆ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೇನೆ. ಅನೇಕ ರೀತಿ ಕೆಲಸ ಮಾಡತಕ್ಕದ್ದು ಇದೆ. ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಮುಂದುವರಿಯಲು ಸತತ ಪ್ರಯತ್ನ ಮಾಡುತ್ತಿದ್ದೇವೆ. ಒಳ್ಳೇ ಕೆಲಸ ಮಾಡತಕ್ಕದ್ದು ಇದೆ ಎಂದು ಅಧಿಕಾರಿಗಳಿಗೆ ಸಹ ಮನವರಿಕೆಯಾಗಿದೆ. ಶರಾವತಿ ಯೋಜನೆಯಿಂದ ನಮ್ಮ ಉದ್ದೇಶ ನೇರವೇರುತ್ತದೆ ಎಂದು ಪೂರ್ಣ ಆಶೆ ಇದೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಿದ್ದಯ್ಯ ಕಾಶಿಮಠ (ಶಿರಹಟ್ಟಿ):—ಗೋವಾ, ಮಹಾರಾಷ್ಟ್ರ ಮತ್ತು ಮದ್ರಾಸು ರಾಜ್ಯಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ಮಾಡಿದ್ದೀರಿ. ಅವರಿಗೆ ಎಷ್ಟು ವಿದ್ಯುಚ್ಛಕ್ತಿ ಕೊಡಬೇಕೆಂದು ನಿರ್ಧಾರ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಗೋವಾಕ್ಕೆ ಮಾತ್ರ ವಿದ್ಯುಚ್ಛಕ್ತಿ ಕೊಡುವುದನ್ನು ಕಮಿಟ್ ಮಾಡಿದ್ದನ್ನು ಹೇಳಿದ್ದೇನೆ. ತಕ್ಷಣ 5,000 ಕಿಲೋ ವ್ಯಾಟ್ಸ್ ಕೊಡುವುದರಿಂದ ಪ್ರಾರಂಭಿಸಿ 50 ಸಾವಿರ ಕೀಲೋ ವಾಟ್ಸ್‌ವರೆಗೆ ಕೊಡುವುದನ್ನು ಕಮಿಟ್ ಮಾಡಿಕೊಂಡಿದ್ದೇವೆ. ಬೇರೆ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಯಾವ ತರಹದ ಮಾತೂ ಕೊಟ್ಟಿಲ್ಲ. ನಮ್ಮ ಹತ್ತಿರ ಸರ್‌ಪ್ಲಸ್ ಆಗಿ ಉಳಿದರೆ ಬೇರೆಯವರಿಗೆ ಕೊಡಬಹುದು. ಗೋವೆಗೆ ಮಾತ್ರ ಮೊದಲು ಕೊಡಲಾಗುವುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಂಪ್‌ಸೆಟ್ಟುಗಳ ವಿಚಾರದಲ್ಲಿ ಕೇಂದ್ರ ಸರ್ಕಾರದವರು 7 ಕೋಟಿ ರೂಪಾಯಿ ಸಾಲ ಕೊಡಬೇಕು ಎಂದು ಇರುವುದನ್ನು ಕೊಡದೇ ಹೋದರೆ ಪಾರ್ಲಿಮೆಂಟಿನ ಮುಂದೆ ನೀವು ಉಪವಾಸ ಸತ್ಯಾಗ್ರಹ ಮಾಡುತ್ತೀರಾ ಅಥವಾ ಏನು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದ ಸಹಾಯ ಕೇಳಿದ್ದೇವೆ. ರೂರಲ್ ಎಲೆಕ್ಟ್ರಿಫಿಕೇಷನ್‌ನಿಂದ ಲಾಭ ಬರುತ್ತಾ ಇಲ್ಲ, ನಷ್ಟ ಆಗುತ್ತದೆ. ಕಾಂಪೆನ್‌ಸೇಷನ್‌ಗೋಸ್ಕರ ಪ್ರಯತ್ನ ಮಾಡುತ್ತಿದ್ದೇವೆ. ಒಂದು ಲಕ್ಷ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡಬೇಕೆಂದು ಇದೆ. ಲೈಫ್ ಇನ್ಸೂರೆನ್ಸ್ ಕಾರ್ಪೋರೇಷನ್ ಅವರು ಇಂಟರೆಸ್ಟ್ ಫ್ರೀ ಲೋನ್ ಕೊಡಿಸಬೇಕೆಂದು ಕೇಳಿದ್ದೇವೆ. ಕ್ರಾಶ್ ಪ್ರೋಗ್ರಾಂನಲ್ಲಿ ಎಷ್ಟೋ ರೀತಿ ಸಹಾಯ ಕೊಡುತ್ತಿದ್ದಾರೆ. ಅದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಬೇಕೆಂದು 4 ನೇ ಯೋಜನೆಯಲ್ಲಿ ಉದ್ದೇಶ ಇದೆ.

Sri C. J. MUCKANNAPPA.—What is the incentive given by the Board and the Government to the farmers for the production of food-grains ?

ಶ್ರೀ ವೀರೇಂದ್ರ ಪಾಟೀಲ್.—ಇನ್‌ಸೆಂಟಿವ್ ಕೊಡುವುದು ಅಂದರೆ ಸೋಯಿದರಲ್ಲಿ ಎಲೆಕ್ಟ್ರಿಸಿಟಿ ಕೊಡುತ್ತೇವೆ. ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡುತ್ತೇವೆ. ಲಿಫ್ಟ್ ಇರಿಗೇಷನ್ ಮಾಡಲು ಎಲ್ಲೆಲ್ಲಿ ಸಾಧ್ಯವಿದೆಯೋ ಅಂದಲ್ಲಿ ಸೊಸೈಟಿ ರಚನೆ ಮಾಡಿಕೊಂಡು ಮುಂದೆ ಬಂದರೆ ಸಹಾಯ ಮಾಡುತ್ತೇವೆ. ಲಿಫ್ಟ್ ಇರಿಗೇಷನ್ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಒಂದು ಕಾರ್ಯಕ್ರಮ ಹಾಕಿಕೊಂಡು ಕ್ರಾಶ್ ಪ್ರೋಗ್ರಾಂನಲ್ಲಿ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಅಲ್ಲಿಂದ ಸಹಾಯ ಬಂದರೆ ಹೆಚ್ಚಿನ ಪ್ರಮಾಣದಲ್ಲಿ ಸಹಾಯಕವಾಗುತ್ತದೆ.

ಶ್ರೀ ಎನ್. ಒ. ಸಾಮಾಜಿ.—(ಮರಾಠಿ ಭಾಷೆಯಲ್ಲಿ).

ಶ್ರೀ ವೀರೇಂದ್ರ ಪಾಟೀಲ್.—ಅದು ಟ್ರಾನ್ಸ್‌ಮಿಷನ್ ಲೈನ್‌ದಿಂದ 5 ಮೈಲಿ ಒಳಗೆ ಇದ್ದರೆ ಮಾಡಬೇಕಾಗುತ್ತದೆ.

ಶ್ರೀ ಎನ್. ಒ. ಸಾಮಜಿ.—(ಮರಾಠಿಯಲ್ಲಿ).

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ರಾಜ್ಯದಲ್ಲಿ ಎಲ್ಲಾ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂದರೆ ಅದಕ್ಕೆ ಟೈಂ ಆಗುತ್ತದೆ. ಅದಕ್ಕೆ ಸುಮಾರು 15 ವರ್ಷವಾಗಬಹುದು. ಶರಾವತಿಯ

ವಿದ್ಯುತ್ ಶಕ್ತಿಯನ್ನು ನಮ್ಮ ರಾಜ್ಯದಲ್ಲಿಯೇ ಪೂರ್ಣ ವಿನಿಯೋಗಿಸಲಾಗುವುದು. ಇತರ ರಾಜ್ಯಗಳಿಗೆ ಒದಗಿಸುತ್ತೇವೆಂದು ಹೇಳಿಲ್ಲ. ಆದರೆ ಗೋವಾ ನಮ್ಮ ಭಾಗ. ಅಲ್ಲಿ ನಮ್ಮ ಅಣ್ಣ ತಮ್ಮಂದಿರುಗಳು ಇದ್ದಾರೆ. ಆದ್ದರಿಂದ ಗೋವಾ ಅಭಿವೃದ್ಧಿಗಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಮಾತು ಕೊಟ್ಟಿದ್ದೇವೆ. ಅದೇ ರೀತಿ ಈ ವರ್ಷ 5 ಸಾವಿರ ಕಿಲೋ ವ್ಯಾಟ್, ಮುಂದಿನ ವರ್ಷ 20 ಸಾವಿರ ಕಿಲೋವ್ಯಾಟ್ ಹೀಗೆ 50 ಸಾವಿರ ಕಿಲೋ ವ್ಯಾಟ್‌ವರೆಗೆ ವಿದ್ಯುಚ್ಛಕ್ತಿಯನ್ನು ಒದಗಿಸುವೆವು. ಇದರಿಂದ ನಮಗೆ ಅನಾನುಕೂಲವಾಗುವುದಿಲ್ಲ. ಹಳ್ಳಿಗಳಲ್ಲಿ ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ಟೈಂ ಆಗುತ್ತದೆ. ಹಳ್ಳಿಗಳಿಗೆ ಬೆಳಕು, ಪವರ್ ಕೊಡತ್ತಾ ಇದ್ದೇವೆ. ಗೋವಾಕ್ಕೆ ಸಹಾಯ ಮಾಡಿದರೆ ಈ ಮಾನ್ಯ ಸದಸ್ಯರಿಗೆ ಏತಕ್ಕೆ ಹೊಟ್ಟೆಉರುಕು ಆಗುತ್ತದೋ ಗೊತ್ತಿಲ್ಲ.

ಶ್ರೀ ಕೆ. ಪಿ. ರೇವಣಸಿದಪ್ಪ.—ಮಧ್ಯೆ ಮಧ್ಯೆ ಕರೆಂಟ್ ನಿಂತು ಹೋಗಿ ತೊಂದರೆಯಾಗುತ್ತದೆ. ಇದನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ತೊಂದರೆ ಯಾವಾಗ ಉಂಟಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮೊನ್ನೆ ಪವರ್ ಜನರೇಟರ್‌ನಲ್ಲಿ ನೀರು ಹೋಗಿ ಕಷ್ಟ ಉಂಟಾಯಿತು. ಇಂಥ ಸಂದರ್ಭದಲ್ಲಿ ಕಷ್ಟ ಬರುತ್ತದೆ.

Sri D. PARAMESWARAPPA (Honnali).—The Government has announced that it is its policy to supply pumpsets to the ryots liberally. There is now greater demand for them. What is the arrangement made by the Government to supply them ?

Mr. SPEAKER.—From 8,000 it was raised to 20,000 and now it is raised to 1 lakh. If that is consumed, more will be given.

ಶ್ರೀ ವೀರೇಂದ್ರ ಪಾಟೀಲ್.—ಆ ಮಾತು ನಾನು ಒಪ್ಪುತ್ತೇನೆ. ಒಂದು ಲಕ್ಷ ಅಥವಾ ಎರಡು ಲಕ್ಷ ಕಿಲೋ ವ್ಯಾಟ್ ಉತ್ಪತ್ತಿಯಾಗುವಾಗ್ಗೆ ಇರುವ ಸಿಬ್ಬಂದಿ ಈಗಲೂ ಅಷ್ಟೇ ಸಿಬ್ಬಂದಿ ಶರಾವತಿಯಲ್ಲಿ ಸಾಕಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಸಿಬ್ಬಂದಿ ಹೆಚ್ಚಾಗುತ್ತಿದೆ. ಪವರ್ ಲೈನ್ ಹಾಕಿ ವಿದ್ಯುತ್ ಶಕ್ತಿ ಒದಗಿಸಿದ ಮೇಲೆ ಸಿಬ್ಬಂದಿ ಹೆಚ್ಚು ಮಾಡಬೇಕಾಗುತ್ತದೆ. ಸಿಬ್ಬಂದಿ ಹೆಚ್ಚು ಮಾಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

Mr. SPEAKER.—With regard to the Indo-Norwegian aid at Karwar, there is a complaint that the supply of power to the processing centre and the training centre has been inordinately delayed.

6-00 P.M.

Sri VEERENDRA PATIL.—I will look into that matter.

Mr. SPEAKER.—The fishing industry is held up for want of a small transmission line from Ankola to Karwar. It is not at all a big distance, but special attention will have to be given to it and it is not to be treated as if it is an ordinary village line, but it is very important.

ಶ್ರೀ ಎಲ್. ಬಿ. ಬರ್ಜೆ.—(ಮರಾಠಿಯಲ್ಲಿ ಪ್ರಶ್ನೆಯನ್ನು ಹಾಕಿದರು).

Mr. SPEAKER.—That is a matter of detail which will have to be attended to.

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಖಾನಾಪುರದಲ್ಲಿ ಕೋ-ಆಪರೇಟೀವ್ ಸೊಸೈಟಿಯವರು ಇದನ್ನು ನಡೆಸುತ್ತಿದ್ದರು. ಅದು ಇತ್ತೀಚೆಗೆ ಮುರಿದು ಬಿತ್ತು. ಅಲ್ಲಿಂದೀಚೆಗೆ ಈ ಜವಾಬ್ದಾರಿಯನ್ನು ಬೋರ್ಡಿನವರೇ ವಹಿಸಿಕೊಂಡಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೆಂಚು, ಇಟ್ಟಿಗೆ ಮತ್ತು ಬಾವಿಗಳನ್ನು ಕೊರೆಯತಕ್ಕ ಯಂತ್ರಗಳ ವಿಚಾರ ಹೇಳಿದ್ದೆವು. ಅವರ ಬಗ್ಗೆ ಏನೂ ಹೇಳಲಿಲ್ಲವಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ನಾವೇ ಆ ಎಲೆಕ್ಟ್ರಿಕ್ ಮೋಟಾರುಗಳನ್ನು ತಯಾರು ಮಾಡಬೇಕೆಂದರೆ ಅದಕ್ಕೆ ಕೋಟ್ಯಾಂತರ ರೂಪಾಯಿಗಳ ಬಂಡವಾಳಬೇಕು, ಅದು ಸಾಧ್ಯವಿಲ್ಲದ ಮಾತು. ಇನ್ನು ಹೆಂಚಿನ ಕಾರ್ಖಾನೆ ವಿಚಾರದಲ್ಲಿ ಇಲಾಖೆಯವರೇ ಆಲೋಚನೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಯಾರಾದರೂ ಖಾಸಗಿಯವರು ಮುಂದೆ ಬಂದರೆ ಅವರಿಗೆ ಸರ್ಕಾರದವರು ಎಲ್ಲ ವಿಧದಲ್ಲೂ ಸಂಪೂರ್ಣ ಸಹಕಾರ ನೀಡುವುದಕ್ಕೆ ತಯಾರಾಗಿದ್ದಾರೆ. ಹೌಸಿಂಗ್ ಬೋರ್ಡಿನವರೋ ಯಾರೇ ಮುಂದೆ ಬರಲಿ ಸಹಾಯ ಮಾಡುತ್ತೇವೆ.

Sri ANNARAO GANAMUKHI.—May I know, out of the present capacity, how much power will not be utilized during the current year with the commissioning of Sharavathy ?

Sri VEERENDRA PATIL.—I have got figures with me. We hav conducted a load survey. The figures are :

1964–65	Generation	300	MGW :	Load on Sharavathy	60	MGW
1965–66	,,	350	,,	do	130	,,
1966–67	,,	570	,,	do	330	,,
1967–68	,,	800	,,	do	508	,,

Mr. SPEAKER.—The House will now adjourn and meet at 8-30 A.M. on Saturday.

The House adjourned at Ten Minutes past Six of the Clock till Thirty Minutes past Eight of the Clock, on Saturday, the 17th April, 1965.

WD 5012—GPB—500—3-9-65